ಜಾಲವಿದೆ. ಗುಬ್ಬಿ ತಾಲ್ಲೂಕಿನಲ್ಲಿ ಸಪ್ಲೈ ಮಾಡಿದ್ದಾರೆ. ಆದಕಾರಣ ಇದನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಬೇಕು. ಅಧಿಕಾರಿಗಳ ಒಂದು ತಂಡ ಮಾಡಿ. ಅವರು ಪತ್ತೆ ಹಚ್ಚುವಂಥ ಕೆಲಸವನ್ನು ಮಾಡಲಿ.

ಶ್ರೀ ಕೃಷ್ಣ ಬೈರೇಗೌಡ :– ಮಾನ್ಯ ಅಧ್ಯಕ್ಷರೆ, ಎಲ್ಲರಿಗೂ ಸರಿಯಾದ ಮಾಹಿತಿ ಹೋಗಬೇಕು, ತಪ್ಪು ಮಾಹಿತಿ ಹೋಗಬಾರದು ಎನ್ನುವ ಕಾರಣಕ್ಕಾಗಿ ಮತ್ತೊಮ್ಮೆ ಹೇಳುತ್ತೇನೆ. ನಾನು ಈಗಾಗಲೇ ಈ ವಿಚಾರವನ್ನು ಹೇಳಿದ್ದೇನೆ, ಮತ್ತೊಮ್ಮೆ ನಾನು ತಮಗೆ ದೃಢೀಕರಿಸಬಯಸುತ್ತೇನೆ ಕೇವಲ ಸೊಸೈಟಿಯವರ ಮೇಲೆ ಮಾತ್ರ ನಾವು ಕೇಸ್ ಹಾಕಿಲ್ಲ, ಸಪ್ಲೈಯರ್ ಮೇಲೆ ಕೇಸ್ ಹಾಕಿದ್ದೇವೆ, ವಿತರಕರು ಎಂದು ನಾನು ಆಗಲೇ ಹೇಳಿದೆ, ವಿತರಕರಲ್ಲಿ ಮಿಲನ್‌ಗೌಡ ಎನ್ನುವವರು ಬರುತ್ತಾರೆ, ನಾಗಣ್ಣ ಎನ್ನುವವರು ಬರುತ್ತಾರೆ, ಫಾಲಾಕ್ಷ ಎನ್ನುವವರು ಬರುತ್ತಾರೆ ಗುಬ್ಬಿ ತಾಲ್ಲೂಕಿನಲ್ಲಿ, ಇನ್ನು ಆಲೂರು ತಾಲ್ಲೂಕಿನಲ್ಲಿ ಕೂಡ ಪತ್ತೆಯಾಗಿದೆ. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು ಈ ಪ್ರಕರಣವನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಅವರು ಇದನ್ನು ಪತ್ತೆ ಮಾಡುತ್ತಾರೆ ಎನ್ನುವ ವಿಶ್ವಾಸ ನನಗಿದೆ. ಪೋಲಿಸ್‌ನವರಿಗೆ ನಾವು ಅವಕಾಶವನ್ನು ಕೊಟ್ಟಿದ್ದೇವೆ, ಅವರು ಈ ಕೆಲಸ ಮಾಡಲಿಲ್ಲವೆಂದರೆ ನಾವು ಏನು ಬೇಕಾದರೂ ಮಾಡುವುದಕ್ಕೆ ಸರ್ಕಾರ ತಯಾರಿದೆ. ಪೋಲಿಸ್‌ನವರು ಒಳ್ಳೆಯ ರೀತಿಯಿಂದ ಕೆಲಸವನ್ನು ಮಾಡುತ್ತಿರುವುದರಿಂದ ಅವರಿಗೆ ಅವಕಾಶವನ್ನು ಕೊಟ್ಟಿದ್ದೇವೆ.

2. ವಿಷಯ :– ಅರಣ್ಯ ಭೂಮಿ ಎಂದು ಹೇಳಿ ಆ ಪ್ರದೇಶದಲ್ಲಿರುವ ಬಡ ಜನರ ಮನೆಗಳನ್ನು ಕೆಡವುತ್ತಿರುವುದನ್ನು ನಿಲ್ಲಿಸುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ(ಮುಧೋಳ್) :– ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲಿ ಸುಮಾರು ಹತ್ತು ಹಳ್ಳಿಗಳಲ್ಲಿ ಅರಣ್ಯ ಭೂಮಿಯಲ್ಲಿ ನಲವತ್ತು, ಐವತ್ತು ವರ್ಷದಿಂದ ಬಡವರು ಮನೆ ಕಟ್ಟಿಕೊಂಡು ಗುಡಿಸಲು ಹಾಕಿಕೊಂಡು ವಾಸವಾಗಿದ್ದಾರೆ.

ಅಧ್ಯಕ್ಷರು :– ಐವತ್ತು, ಅರವತ್ತು ಎಂದು ಹೇಳಬೇಡಿ. ನೂರು ವರ್ಷದಿಂದ ಎಂದು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ :– ನೂರು ವರ್ಷ ಇರಲಿ, ಏನೂ ತೊಂದರೆಯಿಲ್ಲ. 1938 ರಿಂದಲೂ ಇದ್ದವರು, ಅಲ್ಲಿ ಈಗಲೂ ಇದ್ದಾರೆ. ಮುಂಬೈ ಪ್ರಾಂತ್ಯಕ್ಕೆ ನಮ್ಮ ಜಿಲ್ಲೆ ಸೇರಿದ್ದು ಅಂದಿನಿಂದಲೂ ಇದ್ದವರು ಇದ್ದಾರೆ. ಅವರು ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. ಅವರನ್ನು ಈಗ ಅರಣ್ಯ

ಇಲಾಖೆಯವರು, ಇದು ಅರಣ್ಯ ಇಲಾಖೆಗೆ ಸೇರಿದ ಜಮೀನು, ನೀವು ತೆರವು ಮಾಡಬೇಕು ಎಂದು ಹೇಳಿ ನೋಟಿಸ್ ಕೊಟ್ಟು ಅವರನ್ನು ಹೊರಗಡೆ ಕಳುಹಿಸಿ ಮನೆಗಳನ್ನು ಕಿತ್ತುಹಾಕುತ್ತಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಬಡವರು ಅಲ್ಲಿ ಕೂಲಿ ನಾಲಿ ಮಾಡಿ ಬದುಕುತ್ತಿದ್ದಾರೆ. ಅದರಲ್ಲಿಯೂ ವಿಶೇಷವಾಗಿ ಬಡವರಾದ ಲಂಬಾಣಿ ಜನಾಂಗದವರು ಮತ್ತು ಎಸ್‌ಸಿ/ಎಸ್‌ಟಿ ಜನಾಂಗದವರು ಅಲ್ಲಿ ಹೆಚ್ಚಿದ್ದಾರೆ. ಅಲ್ಲಿ ಯಾರೂ ಶ್ರೀಮಂತರು ಇಲ್ಲ. ಅವರನ್ನು ತೆರವುಗೊಳಿಸಬಾರದು. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಕರೆದು ಕೂಡಲೇ ಆದೇಶ ಮಾಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು :– ಕಾರ್‌ಜೋಳ್‌ರವರೆ, ನಿಮ್ಮ ಸಹಾಯಕ್ಕಾಗಿ ಒಂದು ಸಣ್ಣ ವಿಚಾರವನ್ನು ಹೇಳಿಬಿಡುತ್ತೇನೆ. ಅವರು ಪರಿಶಿಷ್ಟ ವರ್ಗ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ ಹಕ್ಕು ಎಂದು ಕಾನೂನು ಇದೆಯಲ್ಲಾ, ಅದರ ಪ್ರಕಾರ ಹಕ್ಕು ಪಡೆಯಲು ಅರ್ಜಿಗಳನ್ನು ಕೊಟ್ಟಿದ್ದಾರೆಯೆ?

ಶ್ರೀ ಗೋವಿಂದ ಎಂ. ಕಾರಜೋಳ :– ಇಲ್ಲಾ ಸರ್, ಅವರದ್ದು ಮತ್ತು ನಮ್ಮದು ಮಲೆನಾಡಿನಲ್ಲಿರತಕ್ಕಂಥ ಸಹ್ಯಾದ್ರಿ ಘಟ್ಟದಲ್ಲಿರತಕ್ಕಂಥ ಜಮೀನಲ್ಲ, ನಮ್ಮದು ಬಯಲು ಸೀಮೆ. ನಮ್ಮಲ್ಲಿ ಅರಣ್ಯ ಇಲಾಖೆಯವರು ಒಂದು ಸಸಿ ಕೂಡ ನೆಟ್ಟಿಲ್ಲ, ಒಂದು ಹುಲ್ಲಿನ ಕಡ್ಡಿಯನ್ನೂ ಕೂಡ ಅವರು ಬೆಳೆಸಿಲ್ಲ. ಅಲ್ಲಿ ಜಮೀನು ಖಾಲಿ ಇತ್ತು. ಆದುದರಿಂದ ಅವರಿಗೆ ಅರ್ಜಿ ಕೊಡತಕ್ಕಂಥ ಅವಕಾಶ ಬಂದಿಲ್ಲ.

ಅಧ್ಯಕ್ಷರು :– ಅದು ಆ ರೀತಿಯಲ್ಲಾರಿ, ಆ ಕ್ಲಾಸಿಫೈಡ್ ಆಗಿದೆಯಲ್ಲ, ಅಲ್ಲಿ ಮರ ಇರಬಹುದು ಅಥವಾ ಮರ ಇಲ್ಲದೇ ಇರಬಹುದು. ಒಂದು ಜಮೀನು ಅರಣ್ಯ ಎಂದು ಕ್ಲಾಸಿಫೈಡ್ ಆದಮೇಲೆ ಅದು ಅರಣ್ಯ ಎಂದೇ ಅರ್ಥ. ಅರಣ್ಯ ಎಂದು ಕ್ಲಾಸಿಫೈಡ್ ಆಗಿಲ್ಲದಿದ್ದರೆ ಅದು ಅರಣ್ಯವಲ್ಲ. ಆದರೆ ನೀವೇನು ತಿಳಿದುಕೊಂಡಿದ್ದೀರೆಂದರೆ ನಮ್ಮ ಮಲೆನಾಡಿನಲ್ಲಿ ಮರಗಿಡಗಳೆಲ್ಲವೂ ಬೆಳೆದಿರುವುದರಿಂದ ಅದು ಅರಣ್ಯ, ನಿಮ್ಮ ಕಡೆ ಮರ ಗಿಡಗಳನ್ನು ಬೆಳೆಸಿಲ್ಲದಿರುವುದರಿಂದ ಅದು ಅರಣ್ಯವಲ್ಲವೆಂದು ತಿಳಿದುಕೊಂಡಿದ್ದೀರಿ. ಅದು ಆ ರೀತಿಯಲ್ಲ. ದಯವಿಟ್ಟು ನೀವು ಈಗಲಾದರೂ ಆ ಭಾಗದ ಜನರಿಂದ ಅರ್ಜಿ ಕೊಡಿಸತಕ್ಕಂಥ ಕೆಲಸವನ್ನು ಮಾಡಿಸಿ.

ಶ್ರೀ ಗೋವಿಂದ ಎಂ. ಕಾರಜೋಳ :– ಮಾನ್ಯ ಅಧ್ಯಕ್ಷರೆ, ಅರಣ್ಯ ಭೂಮಿ ವಿಚಾರವಷ್ಟೇ ಅಲ್ಲದೆ ಅವರು ಕೋರ್ಟಿಗೂ ಕೂಡ ಹೋಗಿದ್ದಾರೆ. ಕೆಲವರು ಕೋರ್ಟಿನಲ್ಲಿ ಕೂಡ ಕೇಸ್ ಹಾಕಿದ್ದಾರೆ.

ಅಧ್ಯಕ್ಷರು :– ನಾನು ಹೇಳಿರುವುದನ್ನು ಕೇಳಿಕೊಳ್ಳಿ, ನನ್ನ ಹತ್ತಿರ ಫಾರ್ಮ್ ಇದೆ, ಅದನ್ನು ನಾನು ನಿಮಗೆ ಕೊಡುತ್ತೇನೆ. ಕಾನೂನು ಪ್ರಕಾರ ನೀವು ಅಲ್ಲಿಯ ಜನರ ಕಡೆಯಿಂದ ಅರ್ಜಿಯನ್ನು ಕೊಡಿಸಿ.

ಶ್ರೀ ಗೋವಿಂದ ಎಂ. ಕಾರಜೋಳ :– ಕೊಡಿಸುತ್ತೇನೆ ಸರ್, ಆದರೆ ಈಗ ಆಗಬೇಕಾದಂಥ ಕೆಲಸ ಬೆಳಗಲಿ, ಲೋಕಾಪುರ, ಲೋಕಾಹಟ್ಟಿ, ಬ್ಯಾಡರಹಳ್ಳಿ, ಅರಳಿಕಟ್ಟಿ ಗ್ರಾಮಗಳಲ್ಲಿ ಈಗ ಮನೆಗಳನ್ನು ಕೆಡವತಕ್ಕಂಥ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಕೂಡಲೇ ಅದನ್ನು ನಿಲ್ಲಿಸಬೇಕು, ಬಡವರು ಅಲ್ಲಿ ವಾಸವಾಗಿದ್ದಾರೆ, ಅದಕ್ಕಾಗಿ ಸರ್ಕಾರದ ವತಿಯಿಂದ ಅರಣ್ಯ ಮಂತ್ರಿಗಳಿಗೆ ತಾವು ಸೂಚನೆ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು :– ಆಯಿತು, ಕುಳಿತುಕೊಳ್ಳಿ.

ಶ್ರೀ ಬಿ.ರಮಾನಾಥ ರೈ(ಅರಣ್ಯ ಸಚಿವರು) :– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಗೌರವಾನ್ವಿತ ಸದಸ್ಯರು ಎತ್ತಿರತಕ್ಕಂಥ ವಿಚಾರ, ಇದು ಕೇವಲ ತಮ್ಮ ಬಯಲು ಸೀಮೆ ಪ್ರದೇಶವಾದ ಕ್ಷೇತ್ರಕ್ಕೆ ಸೀಮಿತವಾದ ವಿಚಾರವಲ್ಲ. ಬೇರೆ ಭಾಗಗಳಲ್ಲಿಯೂ ಈ ರೀತಿಯ ಸಮಸ್ಯೆಗಳಿವೆ. ಒಂದು ವಿಚಾರವೇನೆಂದರೆ, ಆ ಪ್ರದೇಶ ಅರಣ್ಯವೆಂದು ಗುರುತು ಮಾಡಿದ ನಂತರ ಸಮಸ್ಯೆಗಳು ಏನಾಗಿದೆ ಎಂದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ನಾನು ಹೊಸದಾಗಿ ಮಂತ್ರಿಯಾಗಿ ಬಂದಿದ್ದೇನೆ. ಇದರ ಬಗ್ಗೆ ಸಣ್ಣ ಹಿಡುವಳಿದಾರರಿಗೆ ರಕ್ಷಣೆ ಕೊಡುವ ರೀತಿಯಲ್ಲಿ ಏನಾದರೂ ಪ್ರಯತ್ನ ಮಾಡಬೇಕು. ಕಾನೂನು ವ್ಯಾಪ್ತಿಯಲ್ಲಿ ಯಾವ ರೀತಿ ಮಾಡುವುದಕ್ಕೆ ಬರುತ್ತದೆಂದು ನೋಡಬೇಕು. ಕೆಲವು ಕಡೆ ಸುಪ್ರೀಂ ಕೋರ್ಟ್‌ನಿರ್ದೇಶನ ಇರಬಹುದು, Government of Indiaದ ಕಾನೂನು ಇರಬಹುದು, ಈ ಕಾನೂನು ವ್ಯಾಪ್ತಿ ಒಳಗಡೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬಹುದು. ಮುಂದಕ್ಕೆ ನಿರ್ದಿಷ್ಟವಾಗಿ ಇವರಿಗೆ ಸಹಾಯ ಮಾಡಬೇಕೆಂದು ಹೇಳುವುದಾದರೆ ನಾವು ಅದಕ್ಕೆ ಪ್ರಯತ್ನವನ್ನು ಮಾಡಬೇಕು.

ಶ್ರೀ ಗೋವಿಂದ ಎಂ. ಕಾರಜೋಳ : ಅವರು ವಾಸ ಮಾಡಿದಂತಹ ಮನೆಗಳನ್ನು ಕೆಡವಿದ ಮೇಲೆ ಏನು ಮಾಡುವುದಕ್ಕೆ ಬರುತ್ತದೆ?

ಅಧ್ಯಕ್ಷರು : ಅವರು ಬದುಕುವ ರೀತಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪರಿಹಾರ ಕಂಡು ಹಿಡಿಯೋಣ. ಸ್ವಲ್ಪ ತಾಳಿ. ಮಾನ್ಯ ಮಂತ್ರಿಗಳೇ, ತಾವು ಒಂದು ಕೆಲಸ ಮಾಡಿ. ಈಗ ಅವರು ಹೇಳಿದ್ದರಲ್ಲಿ ಒಂದು ಅರ್ಥ ಇದೆ. ಏಕೆಂದರೆ ಕೆಲವು ಕಡೆ ಇದು ಅರಣ್ಯ ಎಂದು ತಿಳಿದುಕೊಂಡು ತಪ್ಪಾಗುತ್ತಿದೆ. ಸದ್ಯಕ್ಕೆ ಯಾರೂ eviction ಮಾಡುವುದಕ್ಕೆ ಅವಕಾಶ ಕೊಡಬೇಡಿ

ಎಂದು ಮಾಡಿ. ಅಷ್ಟೊತ್ತಿಗೆ ಅವರು ಅರ್ಜಿ ಕೊಟ್ಟುಕೊಂಡರೆ, ಆಮೇಲೆ ಕಾನೂನು ಪ್ರಕಾರ ಮುಂದುವರೆಯುವುದಕ್ಕೆ ಅವಕಾಶವಾಗುತ್ತದೆ. ದಯವಿಟ್ಟು ಹಾಗೆ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ : ನೀವು ಮನೆಗಳನ್ನು ಕೆಡುವುದಿಲ್ಲ. ಬಡವರನ್ನು ಹೊರಗೆ ಹಾಕುವುದಿಲ್ಲ. ಗುಡಿಸಲುಗಳನ್ನು ನಾಶ ಮಾಡುವುದಿಲ್ಲವೆಂದು ಹೇಳಿಬಿಡಿ. ಅಷ್ಟು ಸಾಕು.

ಶ್ರೀ ಕೆ.ಜಿ. ಬೋಪಯ್ಯ : ಬಡವರಿದ್ದಾರೆ, ಅವರಿಗೆ ಅರ್ಜಿ ಕೊಡುವುದಕ್ಕೆ ಹೇಳಿ. ನೀವು ಕೋರ್ಟ್ ಕೋರ್ಟ್ ಎಂದು ಹೇಳಿಕೊಂಡು ಹೋಗಬೇಡಿ.

ಶ್ರೀ ಬಿ.ರಮಾನಾಥ ರೈ : ನಮಗೆ ಕೂಡ ಬಡವರ ಬಗ್ಗೆ ಕಾಳಜಿ ಇದೆ. ನಾನೂ ಕೂಡ ಬಹಳಷ್ಟು ವರ್ಷ ಸಾರ್ವಜನಿಕ ಬದುಕಿನಲ್ಲಿದ್ದುಕೊಂಡು ಇಲ್ಲಿಯತನಕ ಕೆಲಸ ಮಾಡಿಕೊಂಡು ಬಂದವನು. ನನಗೆ ಅವರ ಕಷ್ಟ ಗೊತ್ತಿದೆ. ನಮ್ಮ ಕಾನೂನು ಕೂಡ ಗಟ್ಟಿ ಇದೆ. ಅವರಿಗೆ ಏನು ಸಹಾಯ ಮಾಡಬೇಕೆನ್ನುವುದಕ್ಕೆ ನಮ್ಮ ಪ್ರಯತ್ನ ಖಂಡಿತ ಇದೆ. ಮಾನ್ಯ ಅಧ್ಯಕ್ಷರು ಏನು ಸಲಹೆ ಮಾಡಿದ್ದಾರೆ, ಅದನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ಗಂಭೀರವಾಗಿ ಅಲ್ಲ, ತಾವು ದಯಮಾಡಿ ನಿಲ್ಲಿಸುತ್ತೇವೆಂದು ಹೇಳಿ. ಇಲ್ಲ ಆಗುವುದಿಲ್ಲ, ನೀವು ಸ್ಪಷ್ಟವಾಗಿ ಹೇಳಬೇಕು. ಎಸ್‌ಸಿ/ಎಸ್‌ಟಿ ಜನಾಂಗದವರು ಬದುಕಬೇಕಲ್ಲ.

(ಗೊಂದಲ)

ಅಧ್ಯಕ್ಷರು : ಕಾರಜೋಳರವರೇ, ಬಾವಿಗೆ ಹೋಗುವುದು ಬೇಡ, ಇಲ್ಲಿ ಬನ್ನಿ.

ಶ್ರೀ ಕೆ.ಜಿ. ಬೋಪಯ್ಯ : ನಾವು ನಿಲ್ಲಿಸುತ್ತೇವೆಂದು ಹೇಳಿ.

(ಗೊಂದಲ)

(ಈ ಹಂತದಲ್ಲಿ ಶ್ರೀ ಗೋವಿಂದ ಕಾರಜೋಳರವರು ಸದನದ ಬಾವಿಗೆ ಬಂದರು)

ಅಧ್ಯಕ್ಷರು : ನೀವು ಈಗ ನನ್ನ ಮಾತು ಕೇಳುತ್ತೀರೋ ಇಲ್ಲವೋ? ಬನ್ನಿ ನೀವು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರು ಏನು direction ಕೊಟ್ಟರು, ಆ ರೀತಿ ರಕ್ಷಣೆ ಕೊಡುತ್ತೇವೆಂದು ಹೇಳಿ. ಬಹಳಷ್ಟು ಜನ ಬಡವರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಹೊಸ ಸರ್ಕಾರ ಬಂದಮೇಲೆ ಈ ರೀತಿ ಮನೆಗಳನ್ನು ಕೆಡವಿ ಹಾಕುವುದು. ಹಾಗಾದರೆ ಇಲ್ಲಿಯವರೆಗೂ ಯಾವ ಸರ್ಕಾರ ಬಂದರೂ ಈ ರೀತಿ ಏಕೆ ಮಾಡಿಲ್ಲ? ನೀವು ಏಕೆ ಕೊಟ್ಟಿರಿ?

ಅಧ್ಯಕ್ಷರು : ಜಗದೀಶ್ ಶೆಟ್ಟರ್, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಗೋವಿಂದ ಕಾರಜೋಳ, ನೀವು ನಿಮ್ಮ ಸೀಟಿಗೆ ಬನ್ನಿ.

ಶ್ರೀ ಬಿ.ರಮಾನಾಥ ರೈ : ಕಾನೂನು ಚೌಕಟ್ಟಿನೊಳಗೆ ಬಡವರಿಗೆ ಸಹಾಯ ಮಾಡುವುದಕ್ಕೆ ಬದ್ಧವಾಗಿರುವಂತಹ ಸರ್ಕಾರ.

ಅಧ್ಯಕ್ಷರು : ಈಗ ಕಾರಜೋಳರವರಿಗೆ ಏನು ಸಮಸ್ಯೆ ಇದೆ. ಅದು ನನಗೆ ತಿಳಿದ ಹಾಗೆ ಎಲ್ಲಾ ಭಾಗದಲ್ಲೂ ಇದೆ. ಇದಕ್ಕೆ ಒಂದು ಪರಿಹಾರ ಕಂಡು ಹಿಡಿಯುವ ಪ್ರಯತ್ನದಲ್ಲಿದ್ದೇವೆ. ದಯವಿಟ್ಟು ಸ್ವಲ್ಪ ಸಮಯ ಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕೆ ಪರಿಹಾರ ಕಂಡುಹಿಡಿಯುವ ಪ್ರಯತ್ನ ಸರ್ಕಾರ ಮಾಡುತ್ತದೆ, ಆದರೆ ಮನೆಗಳನ್ನು ನಾಳೆ demolish ಮಾಡಿದರೆ ಹೇಗೆ? ಅದಕ್ಕೆ ಪರಿಹಾರ ಕಂಡುಹಿಡಿಯುವವರೆಗಾದರೂ demolish ಮಾಡುವುದನ್ನು held up ಮಾಡಿ.

ಅಧ್ಯಕ್ಷರು : ನಾನು ಒಂದು ಮಾತು ಹೇಳುತ್ತೇನೆ, ಕೇಳಿ. ಮಾನ್ಯ ಬೋಪಯ್ಯನವರೇ ಕುಳಿತುಕೊಳ್ಳಿ. ರವಿಯವರೇ ಒಂದು ಸಂದಿಗ್ಧ ಏನಿದೆ ಎಂದು ಹೇಳುತ್ತೇನೆ ಕೇಳಿ. ಅವರು ಸುಪ್ರೀಂ ಕೋರ್ಟ್ ವಿಚಾರ ಹೇಳುತ್ತಾರಲ್ಲ, ಸುಪ್ರೀಂ ಕೋರ್ಟ್‌ನವರು ಹೇಳುವ ಪ್ರಕಾರ ಇವರು ಮಾಡದೇ ಹೋದರೆ ಇವರಿಗೆ ಅವರು ತೊಂದರೆ ಕೊಡುತ್ತಾರೆ. ಇಲ್ಲಿ ರಕ್ಷಣೆ ಕೊಡುವುದಕ್ಕೆ ಎರಡು ಮೂಲ ಇದೆ. ಒಂದು ಪಾರಂಪರಿಕ ಅರಣ್ಯ ಕಾನೂನು ಪ್ರಕಾರ ರಕ್ಷಣೆ ಕೊಡುವುದಕ್ಕೆ ಅವಕಾಶವಿದೆ. ಒಂದು ಸಲ ಅರ್ಜಿ ಕೊಟ್ಟರೆ ಆ ಅರ್ಜಿ ಅಂತಿಮವಾಗಿ ತೀರ್ಮಾನವಾಗುವವರೆಗೂ ಯಾರಿಗೂ ಬಿಡಿಸುವುದಕ್ಕೆ ಬರುವುದಿಲ್ಲ. ಇನ್ನೊಂದು Forest Conservation Act ಎಂದು 1980ಯಲ್ಲಿ ಬಂದಿದೆ. ಆ Act ಪ್ರಕಾರ ಮೂರು ವರ್ಷದ ಹಿಂದೆ ಎಂದರೆ 78ರಿಂದ ಮಾಡಿದವರಿಗೆ ಕೊಡುವುದಕ್ಕೆ ಅವಕಾಶವಿದೆ. ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಪ್ರತಿ ತಾಲ್ಲೂಕಿಗೆ ಕಮಿಟಿಯನ್ನು ರಚನೆ ಮಾಡಿದ್ದೆವು. ನಿಮ್ಮ ಸರ್ಕಾರ ಬಂದಮೇಲೆ ಆ ಕಮಿಟಿಯನ್ನು ರದ್ದು ಮಾಡಿದೆ. ಈಗ ಪುನಃ ಕಮಿಟಿಯನ್ನು ಪುನರ್‌ರಚನೆ ಮಾಡುವುದಕ್ಕೆ ನಾನು ಆಗಲೇ ಅವರನ್ನು ವಿನಂತಿ ಮಾಡಿಕೊಂಡಿದ್ದೇನೆ. ಈ ಎರಡು ವಿಧಾನದಿಂದ ಈ ರೈತರನ್ನು ಉಳಿಸಬೇಕಾ–

ದಂತಹ ಅಗತ್ಯ ಇದೆ. ನಿಮಗೆ ಎಷ್ಟು concern ಇದೆ, ಅಷ್ಟೇ ನಮಗೂ ಇದೆ. ಅದನ್ನು ಮಾಡುತ್ತೇವೆ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರು ನಮಗೆ ಏನು ಮಾರ್ಗದರ್ಶನ ಕೊಟ್ಟಿದ್ದಾರೆ, ಆ ರೀತಿಯಲ್ಲಿ ನಡೆಯುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಆದರೆ ಈಗ eviction ಮಾಡುವುದಕ್ಕೆ ಕೊಟ್ಟುಬಿಟ್ಟಿದ್ದಾರಲ್ಲ.

ಶ್ರೀ ಬಿ.ರಮಾನಾಥ ರೈ : ಅದನ್ನು ನಿಲ್ಲಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಅದನ್ನು ನಿಲ್ಲಿಸಿ, ನೀವು ನಿಲ್ಲಿಸುತ್ತೇವೆಂದು ಭರವಸೆ ಕೊಡಿ.

ಶ್ರೀ ಬಿ.ರಮಾನಾಥ ರೈ : ನಿಲ್ಲಿಸುತ್ತೇವೆ

(ಗೊಂದಲ)

ಅಧ್ಯಕ್ಷರು : ನೀವು ಸಮಯ ಕೊಡಿ. ಗೊಂದಲ ಸೃಷ್ಟಿ ಮಾಡಬೇಡಿ, ಅದಕ್ಕೆ ಪರಿಹಾರ ಕಂಡು ಹಿಡಿಯಬೇಕು. ಅದನ್ನು ನಾವೂ ನೀವೂ ಸೇರಿ ಮಾಡೋಣ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಇದೇ ಪ್ರಶ್ನೆ ಅವರು ಮನೆಗಳ ಬಗ್ಗೆ ಕೇಳಿದರು.

ಅಧ್ಯಕ್ಷರು : ಅವರು ಹೇಳಿದ್ದಾರೆ, ನಿಲ್ಲಿಸುತ್ತಾರೆ ಬಿಡಿ.

ಶ್ರೀ ಸಿ.ಟಿ. ರವಿ : ಜಮೀನಿಗೆ ಸಂಬಂಧಪಟ್ಟಂತೆ eviction ಗೆ ನಾಳೆ last date.

ಅಧ್ಯಕ್ಷರು : ನಿಮ್ಮ ಜೊತೆಗೆ ನಾವು ಇರುತ್ತೇವೆ ನೀವು ಸುಮ್ಮನಿರಿ.

ಶ್ರೀ ಸಿ.ಟಿ. ರವಿ : ಅವರು ಹೇಳಬೇಕಲ್ಲ. ಇದು ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಪಟ್ಟಿರುವುದು. ಅದು ಬರೀ ಬಾಗಲಕೋಟೆಗೆ ಜಿಲ್ಲೆಗೆ ಸೀಮಿತವಾದರೆ ಕಷ್ಟ. ಇಲ್ಲಿ ನೋಡಿ, ಬಾಳೆಹೊನ್ನೂರಿನ ಮಂಜುನಾಥ ಗೌಡ ಎನ್ನುವವರಿಗೆ ನೋಟೀಸ್ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಅಧ್ಯಕ್ಷರೆ, ನಮ್ಮ ಕಾಲದಲ್ಲಿ ಏನು ಆಗಿಲ್ಲ ಎಂದು ತಮಗೂ ಗೊತ್ತಿದೆ. ದೇಶಪಾಂಡೆಯವರೇ, ತಾವು ರಾಜಕಾರಣ ಮಾಡುವುದಕ್ಕೆ ಹೋಗಬೇಡಿ. ನಮ್ಮ ಕಾಲದಲ್ಲಿ ಯಾರಿಗೂ ಬಡವರಿಗೆ ತೊಂದರೆ ಕೊಡುವುದಕ್ಕೆ ಹೋಗಿಲ್ಲ.

(ಗೊಂದಲ)

ಅಧ್ಯಕ್ಷರು : ಕಾಗೇರಿಯವರೆ, ರವಿಯವರೆ, ನಾವೂ ನೀವೂ ಸೇರಿ ಈ ಸಮಸ್ಯೆಗೆ ಒಂದು ಪರಿಹಾರ ಕಂಡುಹಿಡಿಯೋಣ. ಮಾನ್ಯ ಮಂತ್ರಿಗಳನ್ನು ಇದಕ್ಕೆ ಒಪ್ಪಿಸೋಣ. ಸ್ವಲ್ಪ ಸಮಯ ಕೊಡಿ. ನಿಮಗೆ ಎಷ್ಟು concern ಇದೆ, ನನಗೂ ಅಷ್ಟೇ concern ಇದೆ. ದಯವಿಟ್ಟು ಅವರಿಗೆ ತಿಳಿಸಿ ಹೇಳಿ correct ಮಾಡೋಣ, ಸಮಾಧಾನವಾಗಿ ಇರಿ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಅರಣ್ಯ ಸಚಿವರು ಈಗ ಉತ್ತರ ಕೊಡಬೇಕಾದರೆ, ನಾನು ಒಂದು ವಿಷಯ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ನೋಟಿಸ್ ಕೊಟ್ಟಿರುವುದು ನಿಮಗೆ ತಲುಪಿದೆ. ಚಿಕ್ಕಮಗಳೂರಿನಲ್ಲಿ ನಾರಾಯಣ ಗೌಡರು ಮತ್ತು ಮಂಜುನಾಥ ಗೌಡರು ಅವರಿಗೆ eviction ಗೆ ನಾಳೆ last date ಇದೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ನಿಂತಿದ್ದಾರೆ, ಅವರು ಹೇಳುತ್ತಾರೆ. ಅವರು ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಸಿ.ಟಿ. ರವಿ : ನಾಳೆ ಒತ್ತುವರಿ ತೆರವುಗೊಳಿಸದಿದ್ದರೆ, ನಾವು ಖುಲ್ಲಾ ಮಾಡುತ್ತೇವೆಂದು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು : ರವಿ, ದಯವಿಟ್ಟು ಕೇಳಿ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ನನ್ನದು ಒಂದು ನೋಟಿಸ್ ಇದೆ.

ಅಧ್ಯಕ್ಷರು : ಅದೇ ವಿಷಯ. ಮತ್ತೇ ಏನು ಹೇಳುತ್ತೀರಿ?

ಶ್ರೀ ಸಿ.ಟಿ. ರವಿ : ಅದೇ ವಿಷಯದಲ್ಲಿ ನೋಟಿಸ್ ಇದೆ.

ಶ್ರೀ ಡಿ.ಎನ್. ಜೀವ್‌ರಾಜ್ : ಅದೇ ವಿಷಯದಲ್ಲಿ ನಮ್ಮಿಬ್ಬರದು ಒಟ್ಟಿಗೆ ನೋಟೀಸ್ ಇದೆ.

ಅಧ್ಯಕ್ಷರು : ಕಾರಜೋಳರವರೇ, ದಯವಿಟ್ಟು ನೀವು ಅಲ್ಲಿ ನಿಂತುಕೊಂಡು ಮಾತನಾಡಬಾರದು. ನೀವು ದಯವಿಟ್ಟು ನಿಮ್ಮ ಸ್ಥಳಕ್ಕೆ ಹೋಗಿ. ನಿಮ್ಮ ಸಮಸ್ಯೆಗೆ ಪರಿಹಾರ ಕಂಡುಹಿಡಿಯುತ್ತೇವೆ. ನೀವು ಎಷ್ಟು ಗಡಿಬಿಡಿ ಮಾಡುತ್ತೀರಿ?

(ಈ ಹಂತದಲ್ಲಿ ಶ್ರೀ ಗೋವಿಂದ ಕಾರಜೋಳ ರವರು ತಮ್ಮ ಸ್ಥಳಕ್ಕೆ ಬಂದರು)

ಅಧ್ಯಕ್ಷರು : ಆಯಿತು, ರವಿಯವರೇ ನಿಮ್ಮದು ಅದೇ ವಿಚಾರ ಇದೆಯಲ್ಲ?

ಶ್ರೀ ಸಿ.ಟಿ. ರವಿ : ನಮ್ಮದು ಜಮೀನಿಗೆ ಸಂಬಂಧಪಟ್ಟ ವಿಷಯ; ಅವರದು ಮನೆಗೆ ಸಂಬಂಧಪಟ್ಟ ವಿಷಯ.

ಶ್ರೀ ಗೋವಿಂದ ಎಂ. ಕಾರಜೋಳ : ಸರ್ಕಾರಕ್ಕೆ statement ಮಾಡುವುದಕ್ಕೆ ಹೇಳಿ.

ಅಧ್ಯಕ್ಷರು : ನಮ್ಮ ಮಂತ್ರಿಗಳು ಇದ್ದಾರೆ, ಒಂದು ಕೆಲಸ ಮಾಡಿ. ನಾನು ಹೇಳುತ್ತೇನೆ ಕೇಳಿ. ಇದೊಂದು ವಿಶಿಷ್ಟವಾದಂತಹ ಪ್ರಶ್ನೆ ಇದೆ. ಇದು ಕೆಲವು ತಿಳಿದುಕೊಂಡರೆ ಮಲೆನಾಡು ಪ್ರದೇಶಕ್ಕೆ ಮಾತ್ರ ಅಲ್ಲ. ಈಗ ನಿಮಗೆ ಗೊತ್ತಾಯಿತು ನಮ್ಮಲ್ಲಿ ಅರಣ್ಯ ಇದೆ, ಈ ಸಮಸ್ಯೆ ಬರುತ್ತದೆ. ಇದಕ್ಕೆ ವಿಶೇಷವಾದ ರೀತಿಯಲ್ಲಿ ರಕ್ಷಣೆಯನ್ನು ಎರಡು ಕಾನೂನು ಪ್ರಕಾರ ಕೊಡುವುದಕ್ಕೆ ಅವಕಾಶ ಇದೆ, ಅದಕ್ಕೆ ಮಾನ್ಯ ಮಂತ್ರಿಗಳಲ್ಲಿ ನಾವೂ ನೀವೂ ಎಲ್ಲರೂ ಸೇರಿ, ಒಂದು ಸಭೆ ಕರೆಯಬೇಕೆಂದು ಮಾಡುತ್ತಿದ್ದೇವೆ, ಆ ಸಭೆಯಲ್ಲಿ ಎಲ್ಲರೂ ಕುಳಿತುಕೊಂಡು ಈ ಸಮಸ್ಯೆಯನ್ನು ಬಗೆಹರಿಸತಕ್ಕಂಥ ಪ್ರಯತ್ನವನ್ನು ಮಾಡಬೇಕು.

ಶ್ರೀ ಗೋವಿಂದ ಎಂ. ಕಾರಜೋಳ : ಮನೆಗಳನ್ನು ಕೆಡುವುದನ್ನು ನಿಲ್ಲಿಸಿದರೆ ಸಾಕು ಅದಕ್ಕೆ ಒಂದು statement ಮಾಡಲಿ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಕಾರಜೋಳರವರೇ, ನಾವೂ ಕೂಡ ಬಡವರ ಬಗ್ಗೆ ಅನುಕಂಪ ಇದ್ದು ಕೊಂಡಿರುವವರೇ. ನಾನೂ ಕೂಡ ಸಾರ್ವಜನಿಕ ಜೀವನದಲ್ಲಿ ಸಣ್ಣ ವಿದ್ಯಾರ್ಥಿ ದೆಸೆಯಿಂದ ಬಂದವನೂ ಎಲ್ಲರ ಕಷ್ಟವೂ ನನಗೆಗೊತ್ತಿದೆ. ನಾವು ಯಾರಿಗೂ ಅನ್ಯಾಯ ಮಾಡುವುದಕ್ಕೆ ಈ ಸ್ಥಾನಕ್ಕೆ ಬಂದಿಲ್ಲ. ನನ್ನ ಕಷ್ಟವನ್ನು ಅರ್ಥಮಾಡಿಕೊಳ್ಳಿ. ನಾನು ಖಂಡಿತವಾಗಿ ತಮ್ಮ ಭಾವನೆಗೆ ಪೂರಕವಾಗಿ ನಡೆದುಕೊಳ್ಳುತ್ತೇನೆ. ನೀವು ಪ್ರಶ್ನೆ ಕೇಳಿದಿರಿ, ನಾನು ಉತ್ತರವನ್ನು ತರಿಸಿಕೊಂಡಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಬಡವರ ಮನೆಗಳನ್ನು ಕೆಡುವುದನ್ನು ನಿಲ್ಲಿಸಿದರೆ ಸಾಕು.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ತಾವು ಬೇಕಾಗಿರುವುದನ್ನು ಹೇಳುವುದಾದರೆ ಸರ್ಕಾರ ಏಕೆ ಬೇಕು? ಮಿನಿಸ್ಟರ್ ಏಕೆ ಬೇಕು? ಎಲ್ಲದಕ್ಕೂ ಯಾರೂ yes ಎಂದು ಹೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಆಯಿತು.

ಶ್ರೀ ಬಿ.ರಮಾನಾಥ ರೈ : ನಾವು ತಮ್ಮ ಕಷ್ಟವನ್ನು ಅರ್ಥ ಮಾಡಿ–ಕೊಂಡು, ನಾವು ಖಂಡಿತವಾಗಿ ಕಾನೂನಿನ ಚೌಕಟ್ಟಿನಲ್ಲಿ ತಮ್ಮ ಭಾಗದ ಬಡವರಿಗೆ ತೊಂದರೆ ಆಗದ ಹಾಗೆ ನೋಡಿಕೊಳ್ಳುತ್ತೇವೆ.

ಅಧ್ಯಕ್ಷರು : ok, ಮಾನ್ಯ ರವಿಯವರೆ ತಾವು ಹೇಳಿ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ನಮ್ಮ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಎನ್.ಆರ್.ಪುರ ತಾಲ್ಲೂಕಿನಲ್ಲಿ, ಮೂಡಿಗೆರೆ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯವರು ಒಂದು notice ಕೊಡುತ್ತಿದ್ದಾರೆ. ಆ noticeನಲ್ಲಿ ದಿನಾಂಕ:06.06.2013ರವರೆಗೆ ಅಂದರೆ ನಾಳೆಯವರೆಗೆ ಗಡುವು ಕೊಟ್ಟಿದ್ದಾರೆ. ಅದರಲ್ಲಿ 6ನೇ ತಾರೀಖಿನೊಳಗೆ ನೀವು ಸಾಗುವಳಿ ಮಾಡಿರುವಂಥ ಭೂಮಿಯನ್ನು ತೆರವುಗೊಳಿಸಬೇಕು, ತೆರವುಗೊಳಿಸದಿದ್ದರೆ ಬಲತ್ಕಾರವಾಗಿ police protection ಪ್ರಕಾರ ತೆರವುಗೊಳಿಸುತ್ತೇವೆ. ಆಗ ಅಗತಕ್ಕಂಥ ಆಸ್ತಿ ಹಾನಿಗೆ ನೀವೇ ಜವಾಬ್ದಾರರು ಎಂದು notice ಕೊಟ್ಟಿದ್ದಾರೆ. ಎನ್.ಆರ್.ಪುರ ತಾಲ್ಲೂಕಿನಲ್ಲಿ ಮಂಜುನಾಥ್ ಗೌಡ ಎನ್ನುವವರಿಗೆ notice ಕೊಟ್ಟಿದ್ದಾರೆ. ಚಿಕ್ಕಮಗಳೂರು ತಾಲ್ಲೂಕಿನಲ್ಲಿ ನಾರಾಯಣ ಗೌಡರಿಗೆ ಹಂಗಾಮಿ ಸಾಗುವಳಿ ಚೀಟಿ 1979ನೇ ಇಸವಿಯಲ್ಲಿ ಕೊಡಲಾಗಿದೆ. ಆಗ ಹಂಗಾಮಿ ಸಾಗುವಳಿ ಚೀಟಿಯನ್ನು ಕಂದಾಯ ಇಲಾಖೆಯಿಂದ ಕೊಟ್ಟಿದ್ದು. ಈಗ ಅರಣ್ಯ ಇಲಾಖೆ ಜಮೀನು ಎಂದು ಹೇಳುತ್ತಿದೆ. ಇದು ಅರಣ್ಯ ಇಲಾಖೆಯದೋ, ಕಂದಾಯ ಇಲಾಖೆಯದೋ ಎನ್ನುವ ಬಗ್ಗೆ ಇನ್ನೂ dispute clear ಆಗಿಲ್ಲ. ಇದು clear ಆಗುವುದಕ್ಕೂ ಮುಂಚೆ ಏಕಪಕ್ಷೀಯವಾಗಿ ಅರಣ್ಯ ಇಲಾಖೆಯವರು 'ಇದು ಅರಣ್ಯ ಇಲಾಖೆಯ ಜಮೀನು. ಇಲ್ಲಿ ನೀವು ಅನಧಿಕೃತ ಸಾಗುವಳಿ ಮಾಡಿದ್ದೀರಿ. ತಾವು ಇದನ್ನು ತೆರವುಗೊಳಿಸಬೇಕು' ಎಂದು notice ಕೊಟ್ಟಿದೆ. ಈ ರೀತಿ ಮೂಡಿಗೆರೆ ತಾಲ್ಲೂಕಿನಲ್ಲಿ ಒಬ್ಬರ ಜಮೀನನ್ನು ತೆರವುಗೊಳಿಸುವ ಕೆಲಸವನ್ನು ಮಾಡಿದೆ. ಅವರು ಈಗ ಭಯದ ನೆರಳಿನಲ್ಲಿದ್ದಾರೆ, ಬದುಕಿಗಾಗಿ ಅನಧಿಕೃತ ಸಾಗುವಳಿ ಮಾಡಿರುವಂಥದ್ದು. ಇದರಲ್ಲಿ ಮೂರು ರೀತಿಯ ಅನಧಿಕೃತ ಸಾಗುವಳಿ ಇದೆ. ಇವರು ಎಲ್ಲವನ್ನೂ ಏಕ ರೀತಿಯಲ್ಲಿ ನೋಡಬಾರದು. ಬೆಂಗಳೂರಿನಲ್ಲಿ ಮಾಡಿರುವಂಥ ಒತ್ತುವರಿಯೇ ಬೇರೆ, ಅದು ಆಸ್ತಿ ಹೊಡೆಯುವುದಕ್ಕೆ, ಲೂಟಿ ಮಾಡುವುದಕ್ಕೆ ಮಾಡಿರುವಂಥ ಒತ್ತುವರಿ, ಆದರೆ ಹಳ್ಳಿಗಳಲ್ಲಿ ಬದುಕಿಗಾಗಿ ಒತ್ತುವರಿ ಮಾಡಿರುವಂಥದ್ದು. ಇದರಿಂದ ರಾಷ್ಟ್ರೀಯ ಆದಾಯ ಹೆಚ್ಚಾಗಿದೆ.

ಅಧ್ಯಕ್ಷರು : ನಾನು ಈ ವಿಷಯವಾಗಿ ಹೇಳುವುದೇನೆಂದರೆ, ಇಷ್ಟೊಂದು ವಿವರವಾಗಿ ಚರ್ಚೆ ಮಾಡದೇ ಪ್ರತ್ಯೇಕವಾಗಿ ಬೇರೆ ರೂಪದಲ್ಲಿ ಕೊಡಿ ಈಗ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಈಗ ತಾವೇ ಹೇಳಿದಂತೆ ಅಂತಿಮ ತೀರ್ಮಾನ ಆಗುವವರೆಗೂ ಯಾರನ್ನೂ ತೆರವುಗೊಳಿಸುವುದಿಲ್ಲವೆಂದು ಭರವಸೆಯನ್ನು ಕೊಡಿ. ಇದರ ಬಗ್ಗೆ ಅಂತಿಮ ತೀರ್ಮಾನವಾಗುವವರೆಗೂ ಯಾರನ್ನೂ ತೆರವುಗೊಳಿಸುವುದಿಲ್ಲವೆಂದು ಹೇಳಬೇಕು.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಮಾನ್ಯ ಗೋವಿಂದ ಎಂ.ಕಾರಜೋಳರವರ ಪ್ರಶ್ನೆಯ ವ್ಯಾಪ್ತಿ ಬೇರೆ, ನಿಮ್ಮ ಪ್ರಶ್ನೆಯ ವ್ಯಾಪ್ತಿಯೇ ಬೇರೆಯಾಗಿದೆ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ನಾವು ಇಬ್ಬರೂ ಸಹಿ ಹಾಕಿ ಕೊಟ್ಟಿದ್ದೇವೆ. ನನಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಇಬ್ಬರೂ ಮಾತನಾಡುವುದಕ್ಕೆ ಆಗುವುದಿಲ್ಲ ತಾವು ಕೊಟ್ಟಿರುವ notice ಎಲ್ಲಿದೆ?

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ನಾವು ಇಬ್ಬರೂ ಸಹಿ ಮಾಡಿ, ತಮ್ಮ ಹತ್ತಿರವೇ ಕೊಟ್ಟಿದ್ದೇವೆ.

ಅಧ್ಯಕ್ಷರು : ಆಯಿತು, ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಎಲ್ಲಾ ಕಡೆಗಳಲ್ಲೂ ಮಳೆಯಾಗುತ್ತಿದೆ, ಮಳೆಯಾಗುವಂಥ ಸಂದರ್ಭದಲ್ಲಿ ಭೂಮಿ ಹದ ಮಾಡಿ ಬಿತ್ತನೆ ಮಾಡುವುದಕ್ಕೆ ಹೋಗುತ್ತಾರೆ. ಬಗರ್‌ಹುಕುಂ ಸಾಗುವಳಿ, unauthorized cultivation ಮಾಡಿದಂಥವರೂ ಸಹ ಇರುತ್ತಾರೆ. ಅವರು ಸಾಗುವಳಿ ಮಾಡುವುದಕ್ಕೆ ಪ್ರಾರಂಭ ಮಾಡಿ 25-30-40 ವರ್ಷಗಳಾಗಿದೆ. ಒಂದು ಕಡೆ ಮನೆಗಳನ್ನು ಕಿತ್ತು ಹಾಕುವಂಥದ್ದು, ಇನ್ನೊಂದು ಕಡೆ ಈಗಾಗಲೇ trench ಹೊಡೆದು ಒತ್ತುವರಿ ಏನು ಮಾಡಿದ್ದರು, ಅಲ್ಲಿ ಒಂದು point note ಮಾಡಿ, ಉಳಿದಂತೆ ನೀವು ಸಾಗುವಳಿ ಮಾಡಿಕೊಳ್ಳಿ ಎಂದು ಅರಣ್ಯ ಇಲಾಖೆಯವರು ಮತ್ತು ನಾವೆಲ್ಲಾ ಕುಳಿತು ಬಗೆಹರಿಸಿರುವ ಕಡೆಗಳಲ್ಲೂ ಸಹ ಈಗ ಉಳುಮೆ ಮಾಡುವುದಕ್ಕೆ ಬಿಡುತ್ತಿಲ್ಲ. ಅಲ್ಲಿ ಗಿಡಗಳನ್ನು ನೆಡುವುದಕ್ಕೆ ಶುರು ಮಾಡುತ್ತಿದ್ದಾರೆ. ನಾಳೆ ಅಧಿವೇಶನ ಮುಗಿದ ಮೇಲೆ ಮತ್ತೊಮ್ಮೆ ಸದನ ಸೇರುವುದರೊಳಗೆ ಅಲ್ಲೆಲ್ಲಾ ಗಿಡಗಳನ್ನು ನೆಡುವಂಥ ಕೆಲಸ ಪ್ರಾರಂಭವಾಗುತ್ತದೆ. ಅದಕ್ಕೆ ನಾನು ತಮ್ಮ ಹತ್ತಿರ request ಮಾಡಿಕೊಳ್ಳುವುದೇನೆಂದರೆ, ನಾವು ಸರ್ಕಾರ ನಡೆಸಿದ್ದೇವೆ, ಈ ಬಗ್ಗೆ ದಿಢೀರ್ ಉತ್ತರ ಬೇಡ. ನಮ್ಮ ಮಲೆನಾಡು ಪ್ರದೇಶದಲ್ಲಿ effect ಆಗಿರುವಂಥ ಪ್ರದೇಶದ ಶಾಸಕರಸಭೆಯನ್ನು ಕರೆದು ತಮ್ಮ

ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಕರೆದು ಮಾನ್ಯ ಮಂತ್ರಿಯವರಿಗೆ ಒಂದು ಸೂಚನೆ ಕೊಟ್ಟು, ತಾವು ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುವವರೆಗೆ ಅಲ್ಲಿ ಒತ್ತುವರಿಯಾಗಿರುವಂಥದ್ದನ್ನು ಯಾವುದೇ ಕಾರಣಕ್ಕೂ ತೆರವುಗೊಳಿಸುವುದಿಲ್ಲ, ಅವರಿಗೆ ಬಿತ್ತನೆಗೆ ಅವಕಾಶ ಮಾಡಿಕೊಡುತ್ತೇವೆ, ಮನೆಗಳನ್ನು ಬೀಳಿಸುವುದಿಲ್ಲವೆಂಬ assurance ಕೊಡಿಯೆಂದು ನಾವು ವಿನಂತಿ ಮಾಡುತ್ತಿದ್ದೇವೆ. ನಾವು ಹೊಸದಾಗಿ ಕಾಡು ಕಡಿಯಿರಿ, ಕಾಡು ನಾಶ ಮಾಡಿ ಎಂದು ಹೇಳುತ್ತಿಲ್ಲ. ಅವರಿಗೆ 30–40 ವರ್ಷಗಳಿಂದ ಅವಕಾಶವನ್ನು ಮಾಡಿ ಕೊಟ್ಟಿದ್ದೇವೆ. ಅಲ್ಲಿ ದೀಪದ ವ್ಯವಸ್ಥೆಯಾಗಿದೆ, ಮನೆಗಳನ್ನು ಕಟ್ಟಿ ಆಗಿದೆ, ಸಾಗುವಳಿಯನ್ನು ಮಾಡುತ್ತಿದ್ದಾರೆ. ಮಾನ್ಯ ಜಯಚಂದ್ರರವರೆ, ದಯಮಾಡಿ ಇಂಥದ್ದಕ್ಕೆ ಸಹಕಾರ ಕೊಡಿಯೆಂದು ವಿನಂತಿ ಮಾಡುತ್ತೇನೆ. ಇದು ಎಲ್ಲಾ ಮಲೆನಾಡು ಜಿಲ್ಲೆಗಳಲ್ಲಿ ಇರುವಂಥ ಸಮಸ್ಯೆ ಆಗಿದೆ.

ಅಧ್ಯಕ್ಷರು : ಮಾನ್ಯ ಮಂತ್ರಿಯವರೆ, ಹೇಳಿ.

ಶ್ರೀ ಡಿ.ಎನ್.ಜೀವರಾಜ್ (ಶೃಂಗೇರಿ) : ಮಾನ್ಯ ಅಧ್ಯಕ್ಷರೆ, ನಾನು ಏನೂ ಮಾತನಾಡಿಲ್ಲ. ಈಗ ಮೂಲಭೂತವಾಗಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮಸ್ಯೆ ಇರುವಂಥದ್ದು, ಆದರೂ ಅದು ಶೃಂಗೇರಿ ವಿಧಾನಸಭಾ ಕ್ಷೇತ್ರ ಮೂಡಿಗೆರೆಯಲ್ಲಿ ಹೆಚ್ಚು ಇದೆ.

ಶ್ರೀ ಕೆ.ಶಿವಮೂರ್ತಿ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಇದೆ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಇದೆ.

ಅಧ್ಯಕ್ಷರು : ತಾವು ಏನು ಕೇಳಬೇಕೋ, ಅದನ್ನು ಸರಿಯಾಗಿ ಹೇಳಿ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದಕ್ಕೆ ಬಿಡಲಿಲ್ಲ, ಅದಕ್ಕಿಂತ ಮುಂಚೆ ಹೇಳುತ್ತಿದ್ದಾರೆ.

ಅಧ್ಯಕ್ಷರು : ನಾನು ಮೂಲತಃ ಹೇಳುತ್ತೇನೆ. ತಮಗೆ ಈ ಸಮಸ್ಯೆ ಬಗ್ಗೆ ಸರಿಯಾದಂಥ ಪ್ರಜ್ಞೆ ಇಲ್ಲ, ಗೊತ್ತಾ? ತಾವು ಏನು ಹೇಳುತ್ತೀರೊ, ಅದನ್ನು ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಕೆ.ಶಿವಮೂರ್ತಿ : ಮಾನ್ಯ ಅಧ್ಯಕ್ಷರೆ, ಅವರು ರಾಜಕೀಯ ಮಾಡುತ್ತಿದ್ದಾರೆ.

ಅಧ್ಯಕ್ಷರು : ರಾಜಕೀಯ ಅಲ್ಲ, ಸುಮ್ಮನಿರಿ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ಅವರು ನಾನು ಮಾತನಾಡುವುದು ಬೇಡವೆಂದು ಬರೆದುಕೊಟ್ಟು ಬಿಟ್ಟರೆ ನಾನು ಹಾಗೆ ಕುಳಿತುಕೊಂಡು ಬಿಡುತ್ತೇನೆ.

ಅಧ್ಯಕ್ಷರು : ಆಯಿತು, ಹೇಳಿ.

ಶ್ರೀ ಡಿ.ಎನ್.ಜೀವರಾಜ್ : ಅವರು ಅಪ್ಪಣೆ ಕೊಡಬೇಕಲ್ಲಾ? ಇಲ್ಲಿ ನಿಮ್ಮನ್ನು ಕೇಳಿ ಮಾತನಾಡಬೇಕಾಗಿಲ್ಲ.

ಅಧ್ಯಕ್ಷರು : ಮಾನ್ಯ ಶಿವಮೂರ್ತಿಯವರು ಮಾತುಗಳನ್ನು ದಾಖಲಿಸಿಕೊಳ್ಳ ಬೇಡಿ.

(ಮಾನ್ಯ ಸಭಾಧ್ಯಕ್ಷರ ಆದೇಶದಂತೆ ದಾಖಲಿಸಿರುವುದಿಲ್ಲ)

ಅಧ್ಯಕ್ಷರು : ತಾವು ವಿಷಯವನ್ನು ಸಂಕ್ಷಿಪ್ತವಾಗಿ ಹೇಳಿ.

(ಗೊಂದಲ)

ಶ್ರೀ ಎನ್.ಚಲುವರಾಯ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದ ಸದಸ್ಯರೆ ಪೀಠಾಧ್ಯಕ್ಷರಿಗೆ ಸಹಕರಿಸದಿದ್ದರೆ ಇಲ್ಲಿ ಹೌಸ್ ನಡೆಸುವುದು ಹೇಗೆ ಎಂಬುದನ್ನು ತಾವು ಮುಖ್ಯಮಂತ್ರಿಗಳೇ ಹೇಳ ಬೇಕು.

ಶ್ರೀ ಆರ್.ಅಶೋಕ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಿಗೆ capacity ಇಲ್ಲವೆಂದರೆ ಅವರು ಬೇಕಾದರೆ ಉತ್ತರ ಕೊಡಲಿ. ಇಲ್ಲಿ ಮಂತ್ರಿಗಳು senior ಮಂತ್ರಿಯಾಗಿದ್ದು, ಅವರು ಬಹಳಷ್ಟು ಬಾರಿ ಮಂತ್ರಿಯಾಗಿ ಕೆಲಸ ಮಾಡಿದ್ದಾರೆ, ಅವರಿಗೆ capacity ಇದೆ. ನಾವು ಇಲ್ಲಿ ಅವರಿಂದ ಉತ್ತರವನ್ನು ಕೇಳುತ್ತಿಲ್ಲ, ನಾವು ಮಾನ್ಯ ರಮಾನಾಥ ರೈ ಅವರಿಂದ ಉತ್ತರವನ್ನು ಕೇಳುತ್ತಿದ್ದೇವೆ. ನಾವು ಅವರಿಂದ ಉತ್ತರ ಕೇಳಿದಾಗ ಅವರು ಉತ್ತರ ಕೇಳಲಿ, ನಾವು ಅವರಿಗೆ question ಹಾಕಿಲ್ಲ, ನಾವು ಮಂತ್ರಿಯವರಿಗೆ question ಹಾಕಿದ್ದೇವೆ. ನಮಗೆ ಮಾನ್ಯ ಮಂತ್ರಿಯವರೆ ಉತ್ತರ ಕೊಡಲಿ, ನಾವು ಅವರನ್ನು ಕೇಳುವುದಿಲ್ಲ. ಈ ರೀತಿ ಆಡಳಿತ ಪಕ್ಷದವರು ತೊಂದರೆ ಕೊಟ್ಟರೆ ನಮಗೂ ಸದನವನ್ನು ಹೇಗೆ ನಡೆಸಬೇಕೆಂಬುದು ಗೊತ್ತಿದೆ.

ಅಧ್ಯಕ್ಷರು : Mr. ShivaMurthy.. ...

ಶ್ರೀ ಆರ್.ಅಶೋಕ್ : Forest Act ಏನು ಎಂಬುದನ್ನು ನಿಮ್ಮ ಮಂತ್ರಿಯವರಿಗೆ ಹೇಳಿ, ನಮಗೆ ಹೇಳಬೇಡಿ. ನಮಗೆ ಏಕೆ ಹೇಳುತ್ತಿರಾ? ನಾವು ನಿಮಗೆ question ಕೇಳಿಲ್ಲ. ನೀವು ಯಾರು ಕೇಳುವುದಕ್ಕೆ? ಇಲ್ಲಿ ಮಂತ್ರಿಗಳು ಇದ್ದಾರೆ. Who are you to answer? ನೀವ್ಯಾರು ನಮ್ಮನ್ನು ಕೇಳುವುದಕ್ಕೆ?

ಇಲ್ಲಿ ಮಂತ್ರಿಗಳಿದ್ದಾರೆ, ಅವರು ಉತ್ತರ ಕೊಡುತ್ತಾರೆ. who are you to ask me? ನಿಮ್ಮೊಬ್ಬರಿಗೆ ಅಲ್ಲ ಕಾನೂನು ಗೊತ್ತಿರುವುದು, ಬೇಕಾದಷ್ಟು ಜನ ಇದ್ದಾರೆ.

(ಗೊಂದಲ)

ಅಧ್ಯಕ್ಷರು : ಶಿವಮೂರ್ತಿಯವರೆ, ತಾವು ಸುಮ್ಮನೆ ಕುಳಿತುಕೊಳ್ಳದೇ ಹೋದರೆ ನೀವು ಹೊರಗೆ ಹೋಗಬೇಕೆಂದು ನಾನು ಹೇಳಬೇಕಾಗುತ್ತದೆ. ತಾವು ಸುಮ್ಮನೆ ಇರಿ. ಮಾನ್ಯ ಜೀವರಾಜ್‌ರವರೆ, ವಿಷಯವನ್ನು ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ವಿಷಯವನ್ನೇ ಶುರು ಮಾಡಿಲ್ಲ, ಹೇಳುತ್ತೇನೆ.

ಅಧ್ಯಕ್ಷರು : ಹೇಳಿ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ನಾವು ಈ ಸಮಸ್ಯೆ ಬಗ್ಗೆ ಇವತ್ತಿಗೆ ಚರ್ಚೆ ಮಾಡಿ ಮುಗಿಸುತ್ತೇವೆಂದು ಚರ್ಚೆಗೆ ನಿಂತಿಲ್ಲ. ನಮ್ಮೆಲ್ಲರ ಪ್ರಶ್ನೆ ಇರುವಂಥದ್ದು ಏನೆಂದರೆ, ಈ ರೀತಿ notice ಕೊಡುತ್ತಿರುವಂಥ ಜಾಗಗಳು ಯಾವುದೆಂಬುದರ ಬಗ್ಗೆ ನಾನು ಹೇಳುವುದಕ್ಕಿಂತ ಮುಂಚಿತವಾಗಿ ಅವರು ಗಲಾಟೆ ಶುರು ಮಾಡಿದರು. ಈ ಸಮಸ್ಯೆ ಎನ್.ಆರ್.ಪುರ, ಕೊಪ್ಪ, ಶೃಂಗೇರಿ, ಭಾಗಗಳಲ್ಲಿ ಎರಡು ಡ್ಯಾಮ್‌ಗಳನ್ನು ಕಟ್ಟಿದರು. ಒಂದು ಭದ್ರಾ ಡ್ಯಾಂನ್ನು ಕಟ್ಟಿದರು. ಇನ್ನೊಂದು ಗಾಜನೂರು ಡ್ಯಾಂನ್ನು ಕಟ್ಟಿದರು.

ಈ ಡ್ಯಾಂಗಳನ್ನು ಕಟ್ಟಿದಾಗ ಅಲ್ಲಿರುವಂಥ ರೈತರನ್ನು ಒಕ್ಕಲೆಬ್ಬಿಸಿ ಬೇರೆ ಕಡೆಗೆ ಕಳುಹಿಸಿದರು. ಆಗ ಅವರಿಗೆ Grant Certificate ಕೊಟ್ಟರು. ಅವತ್ತು ತಿಳುವಳಿಕೆ ಇಲ್ಲದಂಥ ಆ ಜನ ಆ Grant Certificate ಗಳನ್ನು ಟ್ರಂಕ್‌ನಲ್ಲಿಟ್ಟರು, ಸೂಟ್‌ಕೇಸ್‌ನಲ್ಲೂ ಅಲ್ಲ, ಟ್ರಂಕ್‌ನ ಒಳಗಿಟ್ಟರು. ಒತ್ತುವರಿ ಜಮೀನು ಎಂದು ಅಂದುಕೊಳ್ಳಲಿಲ್ಲ. ಅವತ್ತು ಯಾರೂ ಆ ಜಮೀನನ್ನು ಬಿಡಿಸುವವರು ಇರಲಿಲ್ಲ, ಅದರಲ್ಲಿಯೇ ಕಾಲ ಹಾಕಿಕೊಂಡಿದ್ದರು. ಆದರೆ ಇವತ್ತು ಆ Grant Certificate ಹರಿದು ಹೋಗಿದೆ ಅಥವಾ ಎಲ್ಲೋ ಹೋಗಿದೆ. ಅವನ ಅಪ್ಪ ಸತ್ತು ಹೋಗಿದ್ದಾನೆ. ಆ ನಿರಾಶ್ರಿತರು ಈಗ ಮತ್ತೊಮ್ಮೆ ನಿರಾಶ್ರಿತರು ಆಗುವ ಸ್ಥಿತಿ ಬಂದಿದೆ. ಆ ಭೂಮಿ 1916ಕ್ಕಿಂತ ಮುಂಚೆ ಫಾರೆಸ್ಟ್ ಎಂದು ಆಗಿತ್ತಂತೆ. ಅದನ್ನೇ ಈಗ ಪಹಣಿಯಲ್ಲಿ, mutation registerನಲ್ಲಿ ಫಾರೆಸ್ಟ್ ಎಂದು incorporate ಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರ ಅಧಿಕೃವಾಗಿ ಸಾಗುವಳಿ ಚೀಟಿಗಳನ್ನು ಕೊಟ್ಟಿದೆ. ಸಾಗುವಳಿ ಚೀಟಿಗಳನ್ನು ಕೊಡದೇ ಇರುವಂಥ ಜಾಗಗಳ ಬಗ್ಗೆ ಒಂದು ಹೋರಾಟ ಇದೆ, ಸಾಗುವಳಿ ಚೀಟಿ

ಇರುವಂಥ ಜಾಗಗಳ ಬಗ್ಗೆ ಇನ್ನೊಂದು ಹೋರಾಟ ಇದೆ. ಸಾಗುವಳಿ ಬೇಟಿ ಇರುವಂಥ ಜಾಗಗಳ ಬಗ್ಗೆ ಇನ್ನೊಂದು ಹೋರಾಟ ಇದೆ. ಡಿ.ಸಿ. ಪರ್ಮಿಷನ್ ಅನ್ನೂ ತೆಗೆದುಕೊಳ್ಳದೇ, ಫಾರೆಸ್ಟ್ ಎಂದು mutationನಲ್ಲಿ incorporate ಮಾಡಿಬಿಟ್ಟಿದ್ದಾರೆ. ಈ ಸಮಸ್ಯೆ ಇರುವಂಥ ಜಾಗಗಳಿಗೂ ನೋಟಿಸ್ ಕೊಡುತ್ತಿದ್ದಾರೆ. ಇದು ಆಗಬಾರದು. ನಮ್ಮ ಇಡೀ ದೇಶದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಾತ್ರ ಡಿ.ಸಿ. ಫಾರೆಸ್ಟ್ ಎನ್ನುವಂಥ 65 ಸಾವಿರ ಹೆಕ್ಟೇರ್ ಜಾಗವಿದೆ. ಡಿ.ಸಿ. ಫಾರೆಸ್ಟ್ ಎನ್ನುವುದು ಚಿಕ್ಕಮಗಳೂರಿನಲ್ಲಿ ಮಾತ್ರವಿದೆ. ಅವತ್ತು ಇದ್ದಂಥ ಡಿ.ಸಿ.ಯವರು ಅದನ್ನು ಯಾವ ಕಾರಣಕ್ಕಾಗಿ ಮಾಡಿದರೋ ಗೊತ್ತಿಲ್ಲ. ಇದನ್ನು ನಾನು ಹೇಳುವುದಕ್ಕೆ ಹೊರಟರೆ ನಮ್ಮಲ್ಲೂ ಉಂಟು ಎಂದು ಹೇಳಿ ಅವರು ಪ್ರಾರಂಭ ಮಾಡಿದರು. ನಾನು ಹೇಳುವುದಕ್ಕೆ ಹೊರಟಿದ್ದು ಏನೆಂದರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಡಿ.ಸಿ. ಫಾರೆಸ್ಟ್ ಇದೆ ಎನ್ನುವುದಾಗಿದೆ.

ಅಧ್ಯಕ್ಷರು : ಜೀವರಾಜ್‌ರವರೆ, ನಾನು ಒಂದು ಮಾತನ್ನು ಹೇಳುತ್ತೇನೆ. ನೀವು ಹೇಳಿರುವಂಥ ವಿಷಯ ಬಹಳ ಪ್ರಮುಖವಾದಂಥ ವಿಚಾರ. ಇದರಲ್ಲಿ ತುಂಬ complexity ಇದೆ. ನಮ್ಮಲ್ಲಿಯೂ ಇಂಥ ಸಮಸ್ಯೆ ಉದ್ಭವವಾಗಿವೆ. ಮುಳುಗಡೆ ಜನರಿಗೆ ಶಿವಮೊಗ್ಗ ತಾಲ್ಲೂಕಿನಲ್ಲಿ ಭೂಮಿ ಕೊಟ್ಟಿದ್ದಾರೆ, ಸಾಗುವಳಿ ಚೀಟಿ ಕೊಟ್ಟಿದ್ದಾರೆ, ಈಗ ಅದು release ಆಗಿದೆ. Release ಆದ ಪ್ರಕಾರ R.T.C.ಯಲ್ಲಿ entryಯನ್ನೇ ಮಾಡಿಕೊಳ್ಳಲಿಲ್ಲ. ಹಾಗಾಗಿ, ಸಾಗುವಳಿ ಚೀಟಿ ಕೊಟ್ಟಿದ್ದರೂ ಕೂಡ ಅಲ್ಲಿ entry ಆಗಿಲ್ಲ. ಇದು ಬಂದಿರುವ ಸಮಸ್ಯೆ. ಇದನ್ನು ಸುದೀರ್ಘವಾಗಿ ಚರ್ಚೆ ಮಾಡಲು ಬೇರೆ ರೂಪದಲ್ಲಿ ಕೊಡಿ, ಚರ್ಚೆ ಮಾಡೋಣ.

ಶ್ರೀ ಸಿ.ಟಿ. ರವಿ : ಈ ತಕ್ಷಣಕ್ಕೆ ಅವರನ್ನು ತೆರವುಗೊಳಿಸುವುದು ಬೇಡ. ಆ ಬಗ್ಗೆ ಸೂಚನೆ ಕೊಡಲಿ. ಆಮೇಲೆ ಚರ್ಚೆ ಮಾಡೋಣ. ಅಷ್ಟು ಹೊತ್ತು ಅವರು ಬದುಕಿಕೊಳ್ಳುತ್ತಾರೆ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, ನೀವು ಹೇಳಿದಂಥ ಅಂಶಕ್ಕೆ ನಾನು ಸಹಮತವನ್ನು ವ್ಯಕ್ತಪಡಿಸಿ ಅದಕ್ಕೆ ಪೂರಕವಾಗಿ ಹೇಳುತ್ತೇನೆ. ಅರಣ್ಯ ಒತ್ತುವರಿಯದು ಅತ್ಯಂತ ಸಂಕೀರ್ಣವಾಗಿರುವಂಥ ಸಮಸ್ಯೆ. ಇದು ಒಂದೊಂದು ಕಡೆ ಒಂದೊಂದು ಸ್ವರೂಪದಲ್ಲಿದೆ. ಚಿಕ್ಕಮಗಳೂರು ಜಿಲ್ಲೆ, ಮಲೆನಾಡಿನಲ್ಲಿ ಒಂದು ರೀತಿ ಇದೆ, ಬಯಲುಸೀಮೆಯಲ್ಲಿ ಒಂದು ರೀತಿ ಇದೆ. ಆದ್ದರಿಂದ, ಅರಣ್ಯ ಒತ್ತುವರಿ ಬಗ್ಗೆ ವಿಶೇಷವಾದ ಚರ್ಚೆಗೆ ಅವಕಾಶ ಮಾಡಿಕೊಡುವುದು ಬಹಳ ಒಳ್ಳೆಯದು. ಅಲ್ಲಿಯವರೆಗೆ ಎಲ್ಲೂ. ಯಾವುದೇ

ರೀತಿಯಲ್ಲೂ ಅರಣ್ಯ ಒತ್ತುವರಿ ಮಾಡಿರುವವರನ್ನು ಒಕ್ಕಲೆಬ್ಬಿಸುವುದಿಲ್ಲ ಎಂದು ಸರ್ಕಾರ ಒಂದು ಭರವಸೆ ಕೊಡಲಿ.

ಶ್ರೀ ಡಿ.ಎನ್. ಜೀವರಾಜ್ : ಇದರ ಬಗ್ಗೆ ಸಮಗ್ರ ಚರ್ಚೆ ಮಾಡಬೇಕೆಂದರೆ ಸದನವಿರುವುದು ನಾಳೆ ಒಂದು ದಿನ ಮಾತ್ರ. ನಾಡಿದ್ದಿಗೆ ಅಧಿವೇಶನ ಮುಗಿಯುತ್ತದೆ ಎಂದು ಹೇಳುತ್ತಿದ್ದೀರಿ. ನೋಟಿಸ್ ಕೊಡಲು last date ಇರುವುದು ನಾಳೆಗೆ. ಇದನ್ನು ಬೇರೆ ರೂಪದಲ್ಲಿ ತರಲು ಸಮಯವಿಲ್ಲ. ಹಿರಿಯರಾದಂಥ ಅರಣ್ಯ ಸಚಿವರಲ್ಲಿ ಈಗ ತಕ್ಷಣಕ್ಕೆ ನಾವು ಕೈ ಮುಗಿದು ಕೇಳುವುದು ಇಷ್ಟೇ, ನೀವು ಏನಾದರೂ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮುಂಚೆ, ಆರು ತಿಂಗಳು ನೋಟಿಸ್ ಕೊಡಬೇಡಿ, ಇದಕ್ಕೆ ಸಮಯಾವಕಾಶ ಕೊಡಿ ಎಂದು ನಿಮ್ಮ ಅಧಿಕಾರಿಗಳಿಗೆ ಹೇಳಿ. ಈ ಆದೇಶವನ್ನು ವಾಪಸ್ಸು ತೆಗೆದುಕೊಳ್ಳಿ. ಶ್ರೀ ನಿಂಗಯ್ಯನವರು ಹೇಳುತ್ತಿರುವುದೂ ನ್ಯಾಯವಾಗಿದೆ, ಅವರ ಊರಿನಲ್ಲಿ ಜಾಗವನ್ನು ಕಡಿದೇ ಹಾಕಿದ್ದಾರೆ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಶ್ರೀಮಾನ್ ನಾರಾಯಣಗೌಡರು ಎನ್ನುವ ಒಬ್ಬ ಕಾಫಿ ಬೆಳೆಗಾರರ 15 ಎಕರೆ ಜಮೀನನ್ನು ಕಡಿದು ಅರಣ್ಯ ಇಲಾಖೆಯವರು 10 ದಿವಸಗಳ ಹಿಂದೆ evict ಮಾಡಿದ್ದಾರೆ. ಮೂಡಿಗೆರೆ ಅರಣ್ಯ ಇಲಾಖೆಯವರು 15 ಎಕರೆ ಕಾಫಿ ತೋಟವನ್ನು ಕಡಿದು evict ಮಾಡಿದ್ದಾರೆ.

ಅಧ್ಯಕ್ಷರು : ಅದು ಅರಣ್ಯ ಭೂಮಿಯೋ ಅಥವಾ ರೆವಿನ್ಯೂ ಭೂಮಿಯೋ?

ಶ್ರೀ ಬಿ.ಬಿ. ನಿಂಗಯ್ಯ : ಅದು ಕಂದಾಯ ಭೂಮಿಯೇ, ಅದು ಅರಣ್ಯ ಇಲಾಖೆಯದೋ ಅಥವಾ ಕಂದಾಯ ಇಲಾಖೆಯದೋ ಎನ್ನುವುದರ ಬಗ್ಗೆ ಇನ್ನೂ dispute ಇದೆ. ಅವರಿಗೆ 1970ನೇ ಇಸವಿಯಲ್ಲಿ ಮಂಜೂರಾಗಿರುವ ಮಂಜೂರಾತಿ ಆದೇಶವಿದೆ.

ಅಧ್ಯಕ್ಷರು : Individual caseಗಳನ್ನು ಮಾಡುವುದಕ್ಕೆ ಬರುತ್ತದೆಯೇ?

ಶ್ರೀ ಬಿ.ಬಿ. ನಿಂಗಯ್ಯ : ಅದೇ ರೀತಿ ಬಹಳಷ್ಟು ಕೇಸುಗಳಿವೆ. ಮತ್ತೆ 32 ಜನರಿಗೆ ನೋಟಿಸ್ ಕೊಟ್ಟಿದ್ದಾರೆ. ಬಹಳ ಗೊಂದಲ ಸೃಷ್ಟಿಯಾಗಿದೆ. ಆ ಕಾರಣಕ್ಕಾಗಿ ಕೂಡಲೇ ಒಂದು ಸಭೆಯನ್ನು convene ಮಾಡಿ, ಈ ರೀತಿಯ ಪ್ರದೇಶಗಳಲ್ಲಿ ಏನೇನು ಗಲಾಟೆಗಳಾಗುತ್ತವೆ, ಏನೇನು ತೊಂದರೆಗಳಿವೆ ಎನ್ನುವ

ಬಗ್ಗೆ ನಮ್ಮನ್ನು ಕರೆದು ಕೇಳಬೇಕು. ಅಲ್ಲಿಯವರೆಗೆ ದಯಮಾಡಿ ಸರ್ಕಾರ ತನ್ನ ತೀರ್ಮಾನವನ್ನು ತಡೆ ಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಮಾನಾಥ ರೈ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಗೋವಿಂದ ಕಾರಜೋಳರವರು, ಜೀವರಾಜ್‌ರವರು, ರವಿಯವರು ಪ್ರಸ್ತಾಪಿಸಿರುವ ಮೂರು ವಿಷಯಗಳಿಗೂ ಭಿನ್ನಭಿನ್ನವಾದಂಥ ವ್ಯಾಪ್ತಿಯಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ರವಿಯವರು ಎತ್ತಿರುವಂಥದ್ದು ಒಂದು ನಿರ್ದಿಷ್ಟವಾದ ಪ್ರಕರಣ. ಜೀವರಾಜ್‌ರವರು ಹೇಳಿರುವಂಥದ್ದಕ್ಕೆ ಸಂಪೂರ್ಣವಾಗಿ ವರದಿ ಈಗ ಸದ್ಯಕ್ಕೆ ನನ್ನಲ್ಲಿ ಇಲ್ಲ. ಅಲ್ಲಿ ಏನೇನು ಆಗಿದೆ ಎನ್ನುವ ವಿಚಾರಗಳನ್ನು ತಾವು ಹೇಳಿದ್ದೀರಿ. ಅದರ ಬಗ್ಗೆ ವರದಿಯನ್ನು ತರಿಸಿ, ಸೂಕ್ತವಾದಂಥ ಉತ್ತರವನ್ನು ನಾನು ಕೊಡುತ್ತೇನೆ. ನಿಂಗಯ್ಯನವರು ಕೇಳಿರುವುದು ಒಂದು ನಿರ್ದಿಷ್ಟವಾದ ಪ್ರಕರಣ. ಅದರ ಬಗ್ಗೆ ನಾನು ಸರ್ಕಾರದ ಉತ್ತರವನ್ನು ಕೊಡಲು ಇಷ್ಟಪಡುತ್ತಿದ್ದೇನೆ. "ಚಿಕ್ಕಮಗಳೂರು ಜಿಲ್ಲೆ ಇಂದಾವರ ಮೀಸಲು ಅರಣ್ಯ ಚಿಕ್ಕೊಳಲೆ ಗ್ರಾಮದ ಸರ್ವೆ ನಂಬರ್ 179ರಲ್ಲಿ ಶ್ರೀ ಕೆ.ಸಿ. ನಾರಾಯಣಗೌಡ ಮತ್ತು ಶ್ರೀಮತಿ ಡಿ.ಆರ್.ಶಕೀಲ ನಾರಾಯಣಗೌಡ ಇವರು 27 ಎಕರೆ 24 ಗುಂಟೆ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುವ ಸಂಬಂಧ 1997–98 ರಲ್ಲಿ ಅರಣ್ಯ ತಕ್ಷೀರು ದಾಖಲಿಸಿದ್ದು, ಕರ್ನಾಟಕ ಅರಣ್ಯ ಕಾಯ್ದೆ, 1963ರ ಕಲಂ 64(ಎ) ರಡಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯಿಂದ ದಿನಾಂಕ: 02–01–1999 ರಂದು ಒತ್ತುವರಿ ತೆರವು ಗೊಳಿಸಲು ಆದೇಶಿಸಲಾಗಿದೆ."

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾವು ಬೇಸಿಕ್‌ಆಗಿ ಕೆಲವೊಂದು ಪ್ರಶ್ನೆಗಳನ್ನು ಎತ್ತಿದ್ದೆವು. ಅವರ ಉತ್ತರದ ಪ್ರತಿ ನಮಗೆಲ್ಲ ಬಂದಿದೆ. ಸುಪ್ರೀಂ ಕೋರ್ಟಿನ ನಿರ್ದೇಶನದ ಪ್ರಕಾರ ನಾವು ಒತ್ತುವರಿಯನ್ನು ತೆರವುಗೊಳಿಸಬೇಕು ಎಂದು ತಾವು ಉತ್ತರದಲ್ಲಿ ಹೇಳಿದ್ದೀರಿ.

ಶ್ರೀ ಬಿ. ರಮಾನಾಥ ರೈ : ಈ ನಿರ್ದಿಷ್ಟ ಪ್ರಕರಣ ಬೇರೆ ರೀತಿಯದ್ದಾಗಿದೆ.

ಅಧ್ಯಕ್ಷರು : ಅವರು ಉತ್ತರ ಹೇಳಲು ಅವಕಾಶ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಅವರು ಉತ್ತರ ಹೇಳಲಿ. ಇದಕ್ಕೆ ಬೇಸಿಕ್‌ಆಗಿ ಒಂದು solution ಹುಡುಕಬೇಕೆಂದು ತಾವು ಹೇಳಿದಿರಿ. ನಾನು ಮುಖ್ಯಮಂತ್ರಿಯಾಗಿದ್ದಾಗ, ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಕರೆದು ಮಾತನಾಡಿ, ಚಿಕ್ಕಮಗಳೂರಿನ ಶಾಸಕರನ್ನೂ ಕರೆದು ಚರ್ಚೆ ಮಾಡಿದ್ದೇವೆ. ಇಲ್ಲಿ ಬೇಸಿಕ್ ಆಗಿ ಸಮಸ್ಯೆ ಇದೆ. ಕಂದಾಯ ಇಲಾಖೆ ಮತ್ತು ಅರಣ್ಯ

ಇಲಾಖೆಯವರು ಒಟ್ಟಿಗೆ ಕುಳಿತು, ಇದರಲ್ಲಿ ಯಾವುದು ಅರಣ್ಯ ಇಲಾಖೆಯ ಜಮೀನು, ಯಾವುದು ಕಂದಾಯ ಜಮೀನು ಎನ್ನುವ ಬಗ್ಗೆ ಸರ್ವೆಯನ್ನೇ ಮಾಡಿಲ್ಲ. ಸುಪ್ರೀಂ ಕೋರ್ಟಿಗೆ ನಮ್ಮ ಅಧಿಕಾರಿಗಳು ಅಫಿಡವಿಟ್ ಕೊಟ್ಟಿದ್ದಾರಲ್ಲ, ಅದಕ್ಕೆ ಏನಾದರೂ base ಇದೆಯೇ? ಅದನ್ನು ನೀವು ಮೊದಲು ತಿಳಿದುಕೊಳ್ಳಿ. ಸ್ವಲ್ಪ ಸ್ಟಡಿ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಏನು ಚರ್ಚೆಯಾಗುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ರವಿಯವರು ಕೇಳಿರುವುದು ನಿರ್ದಿಷ್ಟವಾದ ಪ್ರಕರಣದ ಬಗ್ಗೆ. ನೀವು ಜನರಲೈಸ್ ಮಾಡಿಕೊಂಡು ಬಿಟ್ಟಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ಈಗಾಗಲೇ 30 ನೋಟಿಸ್‌ಗಳು ಬಂದಿವೆ.

(ಗೊಂದಲ)

ಅಧ್ಯಕ್ಷರು : ಶೆಟ್ಟರ್‌ರವರೇ, ಒಂದು ನಿಮಿಷ ತಾಳಿ, ಜಯಚಂದ್ರರವರು ಏನು ಹೇಳುತ್ತಾರೋ ಹೇಳಲಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, zero hourನಲ್ಲಿ ಈ ರೀತಿ ಪ್ರಸ್ತಾಪಿಸುತ್ತಾ ಹೋದರೆ ಹೇಗೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : Zero hour ನಲ್ಲಿ ಬಹಳಷ್ಟು ವಿಷಯಗಳು ಪ್ರಸ್ತಾಪವಾಗಿವೆ. Zero hour ಇರುವುದು ಮಹತ್ವದ ವಿಷಯಗಳ ಬಗ್ಗೆ ಚರ್ಚೆ ಮಾಡಲು. ಮಾನ್ಯ ರವಿಯವರು ಒಂದು ನಿರ್ದಿಷ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಿದ್ದರೂ ಇದರಲ್ಲಿ ಜನರಲ್ ಆಗಿ ಬಹಳಷ್ಟು ವಿಷಯಗಳಿವೆ. ಈಗ ಬಹಳಷ್ಟು ಕಡೆ ನೋಟಿಸ್ ಕೊಡುತ್ತಿದ್ದಾರೆ. ತಾವು ಈಗಾಗಲೇ ಹೇಳಿದುದನ್ನು ನಾನು ಸ್ವಾಗತ ಮಾಡುತ್ತೇನೆ, ಇದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿ ಒಂದು ನಿರ್ಣಯ ಕೈಗೊಳ್ಳಬೇಕಾಗುತ್ತದೆ. ಸುಪ್ರೀಂ ಕೋರ್ಟಿನಲ್ಲಿ 2013ರಲ್ಲಿ ಒಂದು Writ Petition file ಆದಮೇಲೆ, ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಬೇಕು ಎನ್ನುವ ಕಾರಣದಿಂದಾಗಿ ಇಲ್ಲಿ ಅಧಿಕಾರಿಗಳು ನೋಟಿಸ್ ಕೊಡುತ್ತಿದ್ದಾರೆ. ಅಲ್ಲಿ ಉತ್ತರ ಕೊಡುವ ಸಲುವಾಗಿ, ಅಲ್ಲಿ ಸಮಾಧಾನ ಮಾಡುವ ಸಲುವಾಗಿ ಇವರು ಇಲ್ಲಿ ನೋಟಿಸ್ ಕೊಡುತ್ತಿದ್ದಾರೆ. ಆದರೆ ಮೂಲವಾಗಿ ಅಲ್ಲಿ ಬೇಸಿಕ್ ಆಗಿ ಏನಿದೆ ಎನ್ನುವುದನ್ನು ಯಾರೂ ಅರ್ಥಮಾಡಿಕೊಳ್ಳಲು ತಯಾರಿಲ್ಲ. ಅದನ್ನು ಅರ್ಥ ಮಾಡಿಕೊಳ್ಳಿ, ಚರ್ಚೆ

ಮಾಡಿ, ಅಲ್ಲಿಯವರೆಗೆ ಅವರಿಗೆ ರಕ್ಷಣೆ ಕೊಡಿ ಎಂದು ನಾನು ಕೇಳುತ್ತಿದ್ದೇನೆ. ಇದು ಒಂದೇ ಅಲ್ಲ, ಇನ್ನೂ ಬಹಳ ಜನರದ್ದು ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಅಧ್ಯಕ್ಷರೆ, ಬಾಲಸುಬ್ರಮಣಿಯನ್‌ರವರ ವರದಿಯನ್ನು ಆಧರಿಸಿ ಕಾರ್ಯದರ್ಶಿಗಳ ಮಟ್ಟದ ಒಂದು ಉನ್ನತ ಮಟ್ಟದ ಸಮಿತಿಯನ್ನು ಮಾಡುತ್ತೇವೆ ಎಂದು ಸರ್ಕಾರದವರು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಅದುವರೆಗೆ ಸ್ಥಳದಲ್ಲಿ trench ಹೊಡೆಯುವಂಥ ಕೆಲಸ ನಡೆದಿರುವುದನ್ನು ನಿಲ್ಲಿಸುವುದಕ್ಕೆ ಸೂಚನೆ ಕೊಡಬೇಕು. ಒತ್ತುವರಿ ಮಾಡಿಕೊಂಡಿದ್ದಾರೆಂದು trench ಹೊಡೆಯುತ್ತಿದ್ದಾರೆ. ನನ್ನ ಕ್ಷೇತ್ರದ ಸಿದ್ದಾಪುರ, ನಿಲಕುಂದ ಪಂಚಾಯಿತಿಗಳಲ್ಲಿ ಇವತ್ತೂ trench ಹೊಡೆಯುತ್ತಿದ್ದಾರೆ. ನಮ್ಮ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರು ಒತ್ತುವರಿ ಮಾಡಿಕೊಂಡಿದ್ದಾರೆಂದು ಅವರ ಮನೆಯನ್ನು ಒಡೆಯುತ್ತಿದ್ದಾರೆ. ಆದ್ದರಿಂದ ಸರ್ಕಾರ ಸ್ಪಷ್ಟವಾದ ಸೂಚನೆಯನ್ನು ಕೊಡಬೇಕು.

ಅಧ್ಯಕ್ಷರು : ಕಾಗೇರಿಯವರೆ, ಒಂದು ವಿಷಯವನ್ನು ಹೇಳುತ್ತೇನೆ. ಇಂಡೀಕರಣ ಎಂದು ಮಾಡಿಟ್ಟಿದ್ದಾರೆ, ಅದು ಗೊತ್ತೇ? ಅದನ್ನು ಮಾಡಿರುವುದು ಯಾವಾಗ? ಅದರ ಪರಿಣಾಮವಾಗಿಯೇ ಇದೆಲ್ಲಾ ನಡೆಯುತ್ತಿರುವುದು.

ಶ್ರೀ ಬಿ.ರಮಾನಾಥ ರೈ : ಸನ್ಮಾನ್ಯ ಗೌರವಾನ್ವಿತ ಸದಸ್ಯರು ಪ್ರತ್ಯೇಕವಾದ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಪ್ರತಿಯೊಂದೂ ಕೂಡ ಬೇರೆ ಬೇರೆ ಆಯಾಮಕ್ಕೆ ಹೋಗುತ್ತದೆ. ಈ ಸಂದರ್ಭದಲ್ಲಿ ನಾನು ನಿರ್ದಿಷ್ಟವಾದಂಥ ಪ್ರಕರಣದ ಬಗ್ಗೆ ಉತ್ತರ ಕೊಡಬೇಕೆಂದಿದ್ದೇನೆ. ಅದರ ಜೊತೆಯಲ್ಲಿ, ಜಗದೀಶ್ ಶೆಟ್ಟರ್‌ರವರು ಜಂಟಿ ಸರ್ವೆಯಾಗಬೇಕಾಗಿದೆ ಎಂದು ಹೇಳಿದರು. ಆ ಸಮಸ್ಯೆಗಳು ನಮಗೆಲ್ಲ ಗೊತ್ತಿದೆ. ಅದರ ಬಗ್ಗೆ ನಾವು ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಮಾಡಲು ನಾವು ಪ್ರಯತ್ನ ಮಾಡುತ್ತೇವೆ. ಅದರ ಬಗ್ಗೆ ನಾವು ಚಿಂತನೆಯನ್ನೂ ಕೂಡ ನಡೆಸಿದ್ದೇವೆ. ನಾವು ಅದಕ್ಕೆ ಯಾವ ರೀತಿಯಲ್ಲಿ ಮಾಡಬೇಕು ಎನ್ನುವುದರ ಬಗ್ಗೆ ನಾವು ಯೋಚನೆ ಮಾಡುತ್ತಿದ್ದೇವೆ. ಇದು ನಿರ್ದಿಷ್ಟವಾದ ಪ್ರಕರಣ, ತಾವು ಏನು ಹೇಳಿದಿರಿ, ಕೆ.ಸಿ. ನಾರಾಯಣಗೌಡ ಇವರು 27 ಎಕರೆ 24 ಗುಂಟೆ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುವ ಸಂಬಂಧ 1997–98ರಲ್ಲಿ ಅರಣ್ಯ ತಕ್ಷೀರು ದಾಖಲಿಸಿದ್ದು, ಕರ್ನಾಟಕ ಅರಣ್ಯ ಕಾಯ್ದೆ.....

(ಗೊಂದಲ)

ಅಧ್ಯಕ್ಷರು : ಸಚಿವರು ಉತ್ತರ ಹೇಳುವುದಕ್ಕಾದರೂ ಬಿಡಿ.

ಶ್ರೀ ಸಿ.ಟಿ. ರವಿ : ನಾರಾಯಣಗೌಡರವರ ಪ್ರಕರಣ ಕೇಳಿಯೇ ಇಲ್ಲ.

ಶ್ರೀ ಬಿ.ರಮಾನಾಥ ರೈ : ನೀವು ಕೇಳಿದ್ದೀರಿ.

(ಗೊಂದಲ)

ಅಧ್ಯಕ್ಷರು : ಅವರಿಗೆ ಉತ್ತರ ಬೇಡವಂತೆ ಬಿಡಿ.

(ಗೊಂದಲ)

ಶ್ರೀ ಸಿ.ಟಿ. ರವಿ: ನಾನು ಕೇಳಿದ್ದು ಏನೆಂದರೆ, ಚಿಕ್ಕಮಗಳೂರು ಜಿಲ್ಲೆ ಬಹುತೇಕ ಭಾಗಗಳ ಅರಣ್ಯ ಕಂದಾಯ ಪ್ರದೇಶಗಳಲ್ಲಿ ಸುತ್ತಮುತ್ತಲ ಜಾಗದ ರೈತರುಗಳು ಸಂದ್ದಿಗತೆಯಲ್ಲಿ ತೊಡಗಿರುವುದು ಆತಂಕಕಾರಿಯಾಗಿದೆ.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ರವಿಯವರೇ ಕೇಳಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ. ರವಿ : ನಾನು ನಾರಾಯಣಗೌಡರ ಪ್ರಕರಣ ಕೇಳಿಯೇ ಇಲ್ಲ. ನೀವು ಒಂದು ಪ್ರಕರಣ ಇಟ್ಟುಕೊಂಡು ಹೇಳುತ್ತಿದ್ದೀರಿ. ಮಾನ್ಯ ಸಚಿವರು ನಾನು ಕೊಟ್ಟಿರುವ ನೋಟಿಸ್ ಅನ್ನು ಓದಲಿ.

ಅಧ್ಯಕ್ಷರು : ಹಾಗಲ್ಲ, ಸ್ವಲ್ಪ ಸುಮ್ಮನಿರಿ. ಈಗ ನೀವು ಒಂದು ವಿಷಯವನ್ನು ಪ್ರಸ್ತಾಪ ಮಾಡಿದಿರಿ. ಸರ್ಕಾರದಿಂದ ಹೇಳಿಕೆ ಕೊಡುವುದಕ್ಕೆ ಅಧಿಕಾರವಿದೆ. ನಾನು ಒಂದು ಮಾತು ಹೇಳುತ್ತೇನೆ.

ಶ್ರೀ ಸಿ.ಟಿ. ರವಿ : ಒಂದು ನಿಮಿಷ ಅಧ್ಯಕ್ಷರೆ, ಮಾನ್ಯ ಸಚಿವರು ನಾನು ಕೊಟ್ಟಿರುವ ನೋಟಿಸ್ ಅನ್ನು ಓದಲಿ. ನನ್ನ ನೋಟಿಸ್‌ನಲ್ಲಿ ನಾರಾಯಣಗೌಡರ ಪ್ರಕರಣವನ್ನು ಕೇಳಿಲ್ಲ.

(ಗೊಂದಲ)

ಅಧ್ಯಕ್ಷರು : ಆ ಸನ್ನಿವೇಶ ಏಕೆ ಬಂದಿದೆ ಎನ್ನುವುದನ್ನು ಅರಣ್ಯ ಸಚಿವರು ಹೇಳುತ್ತಾರೆ.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ಈ ರೀತಿಯೇ ಉತ್ತರ ಕೊಡಬೇಕೆಂದು ಸದಸ್ಯರು ಕೇಳಬಾರದು.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್ : ಅವರು ಪ್ರಶ್ನೆ ಕೇಳಿರುವುದೇ ಬೇರೆ, ಮಂತ್ರಿಯವರು ಉತ್ತರ ಕೊಡುವುದೇ ಬೇರೆ. ನಾರಾಯಣಗೌಡರ ಬಗ್ಗೆ ಕೇಳಿಯೇ ಇಲ್ಲ.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ನಾನು ಉತ್ತರ ಕೊಡುತ್ತೇನೆ. ಅದು ನಿಮಗೆ ಸಂಬಂಧಿಸಿಲ್ಲವೆಂದರೆ ಬಿಟ್ಟುಬಿಡಿ. ನಾನು ಉತ್ತರ ಕೊಡುತ್ತೇನೆ. ಸಿ.ಟಿ. ರವಿಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ಪ್ರಕರಣದ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಅದು record ನಲ್ಲಿದೆ. ಅದಕ್ಕಾಗಿ ನಾನು ಈ ಪ್ರಶ್ನೆಗೆ ಉತ್ತರವನ್ನು ಕೊಡುತ್ತಿದ್ದೇನೆ. "ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 64(ಎ) ರಡಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯಿಂದ ದಿನಾಂಕ: 02--01--1999 ರಂದು ಒತ್ತುವರಿ ತೆರವುಗೊಳಿಸಲು ಆದೇಶಿಸಲಾಗಿದೆ. ಸದರಿ ಆದೇಶದ ಮೇಲೆ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಮೇಲ್ಮನವಿ ಪ್ರಾಧಿಕಾರ, ಶಿವಮೊಗ್ಗ ಇಲ್ಲಿ ಮೇಲ್ಮನವಿ ಸಲ್ಲಿಸಿದ್ದು, ದಿನಾಂಕ: 20--03--2000 ರಂದು ಸದರಿಯವರ ಮೇಲ್ಮನವಿಯನ್ನು ವಜಾಗೊಳಿಸಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು ಇವರು ಮಾಡಿರುವ ಆದೇಶವನ್ನು ಖಾಯಂಗೊಳಿಸಿದೆ. ಈಗಾಗಲೇ ಒತ್ತುವರಿ ತೆರವುಗೊಳಿಸಲು ಆದೇಶ ನೀಡಿ 13 ವರ್ಷ ಕಳೆದಿದ್ದು, ಸದರಿಯವರು ಒತ್ತುವರಿ ತೆರವುಗೊಳಿಸಿ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆ ವಶಕ್ಕೆ ನೀಡದೇ ಇರುವ ಕಾರಣ ದಿನಾಂಕ 30--05--2013ರಂದು ಅಂತಿಮ ನೊಟಿಸ್ ಜಾರಿ ಮಾಡಲಾಗಿದ್ದು, ದಿನಾಂಕ: 06--06--2013ರೊಳಗೆ ಒತ್ತುವರಿ ತೆರವುಗೊಳಿಸಲು ಸೂಚಿಸಲಾಗಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 202/95 ಮತ್ತು ಮಧ್ಯಂತರ ಅರ್ಜಿ ಸಂಖ್ಯೆ: 703ರ ಪ್ರಕರಣದಲ್ಲಿ ಹೊರಡಿಸಿರುವ ನಿರ್ದೇಶನದನ್ವಯ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯವು ತನ್ನ ಪತ್ರ ದಿನಾಂಕ: 03--02--2002ರಲ್ಲಿ ಅರಣ್ಯ ಪ್ರದೇಶಗಳಲ್ಲಿ ಆಗಿರುವ ಅಕ್ರಮ ಒತ್ತುವರಿಗಳನ್ನು ತೆರವುಗೊಳಿಸಲು ಕಾಲಬದ್ಧ ಯೋಜನೆಯೊಂದನ್ನು ರೂಪಿಸಿಕೊಳ್ಳಲು ಎಲ್ಲಾ ರಾಜ್ಯ ಸರ್ಕಾರಗಳಿಗೆ ಸೂಚನೆಯನ್ನು ನೀಡಿದೆ. ಈ ಸೂಚನೆಯ ಮೇರೆಗೆ ಚಿಕ್ಕಮಗಳೂರು ಜಿಲ್ಲೆಯ ಒತ್ತುವರಿಗಳನ್ನು ಸಹ ತೆರವುಗೊಳಿಸಲಾಗುತ್ತಿದೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಮಾಜ ಪರಿವರ್ತನಾ ಸಮುದಾಯ, ಇವರು ಒತ್ತುವರಿ ವಿಚಾರವಾಗಿ ದಾಖಲಿಸಿರುವ, ರಿಟ್ ಅರ್ಜಿ ಸಂಖ್ಯೆ: 15511--14/2013ರಲ್ಲಿ ಚಿಕ್ಕಮಗಳೂರು ಜಿಲ್ಲೆಯ 10 ಎಕರೆ ಮತ್ತು ಅದಕ್ಕೂ ಮೇಲ್ಪಟ್ಟ ಅರಣ್ಯ ಒತ್ತುವರಿಗಳ ಬಗ್ಗೆ ಪ್ರಸ್ತಾಪಿಸಿರುತ್ತಾರೆ. 10 ಎಕರೆ ಮತ್ತು ಅದಕ್ಕೂ ಮೇಲ್ಪಟ್ಟ ಅರಣ್ಯ ಪ್ರದೇಶಗಳ ಒತ್ತುವರಿಗಳನ್ನು ತೆರವುಗೊಳಿಸಲು ತೆಗೆದುಕೊಂಡ ಕ್ರಮಗಳ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಅಫಿಡವಿಟ್ ಸಹ ನಾವು ಸಲ್ಲಿಸಬೇಕಾಗಿದೆ. ಆದುದರಿಂದ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಹಾಗೂ ಕಾನೂನಿನಂತೆ ಅರಣ್ಯ

ಒತ್ತುವರಿಯನ್ನು ತೆರವುಗೊಳಿಸಲಾಗುತ್ತಿದೆಯೇ ಹೊರತು ಯಾವುದೇ ಕೃಷಿಕರಿಗೆ ಅನಗತ್ಯ ತೊಂದರೆ ನೀಡಲಾಗುತ್ತಿರುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಮಂತ್ರಿಯವರೆ, ನಾನು ಒಂದು ಮಾತು ಹೇಳುತ್ತೇನೆ, ತಪ್ಪು ತಿಳಿದುಕೊಳ್ಳಬೇಡಿ. ಏಕೆಂದರೆ, I am more concerned a bout this forest land ಸದಸ್ಯರು ಏನು ಬರೆದುಕೊಟ್ಟಿದ್ದಾರೆ, ಅವರಿಗೆ Supreme Court Judgment ಗೊತ್ತಿದೆ, ಎಲ್ಲ ನಮಗೆ ಗೊತ್ತಿದೆ. ಅದನ್ನೇ ನೀವು follow ಮಾಡುವುದಾದರೆ ಜನರಿಗೆಲ್ಲ ವಿಷ ಕೊಡುವುದು ಬಹಳ ಒಳ್ಳೆಯದು. ಆದ್ದರಿಂದ, ಅರಣ್ಯ ಭಾಗದಿಂದ ಬರತಕ್ಕಂಥ ಎಲ್ಲಾ ಶಾಸಕರನ್ನು ಒಂದು ಕಡೆ ಸಭೆ ಸೇರಿಸಿ ಚರ್ಚೆ ಮಾಡಿ. ಅದರ ಸಾಧಕ ಬಾಧಕಗಳನ್ನು ನೋಡಿ ನೀವು ಒಂದು ಪ್ರತ್ಯೇಕ decision ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ತಾವು ಒಳ್ಳೆಯ ಸಲಹೆ ಕೊಟ್ಟಿದ್ದೀರಿ. ಅರಣ್ಯ ಅತಿಕ್ರಮಣ ಸಮಸ್ಯೆ ಬಹಳ ಜ್ವಲಂತ ಸಮಸ್ಯೆ. ಅದರ ಬಗ್ಗೆ ನಮಗೂ ಬಹಳ ಪರಿಚಯ ಇದೆ. ನಮ್ಮ ಜಿಲ್ಲೆಯಲ್ಲೂ ನಿಮ್ಮ ಜಿಲ್ಲೆಯಲ್ಲೂ ಈ ಸಮಸ್ಯೆ ಇದೆ. ತಾವು ಬಹಳ ಆಸಕ್ತಿ ತೆಗೆದುಕೊಂಡು ಸಮಸ್ಯೆ ಬಗೆಹರಿಸುವ ಸಂಬಂಧ ಒಳ್ಳೆಯ ಸಲಹೆ ಕೊಟ್ಟಿರಿ. ಆದರೆ, ಈ notice ಕೊಡುವ ಕೆಲಸ ಇತ್ತೀಚೆಗೆ ಪ್ರಾರಂಭವಾಗಿದ್ದು ಅಲ್ಲ. ಇದು ಕಳೆದ ಒಂದೂವರೆ ವರ್ಷಗಳಿಂದ ನಡೆಯುತ್ತಿದೆ. Record ಇದೆ, ನೋಡಿ. ಇವರ ಸರ್ಕಾರ ಆಡಳಿತದಲ್ಲಿ ಇದ್ದಾಗಲೇ ನೋಟಿಸ್ ಕೊಡುವುದು ಪ್ರಾರಂಭವಾಗಿದೆ.

(ಗೊಂದಲ)

ಅಧ್ಯಕ್ಷರು : ಚರ್ಚೆ ಸಾಕು. ಮುಂದಿನ ವಿಷಯ ತೆಗೆದುಕೊಳ್ಳೋಣ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಸುಮ್ಮನಿರಿ. ನಾನು ಇದರ ಬಗ್ಗೆ ಸರ್ಕಾರದಲ್ಲಿ appeal ಮಾಡಿಕೊಂಡಿದ್ದೇನೆ. ಸಭೆ ಕರೆದು ಚರ್ಚೆ ಮಾಡಿ ಸರಿ ಮಾಡಿಕೊಡಿ.

(ಗೊಂದಲ)

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ಸರ್ಕಾರ ಜನರ ಬದುಕಿನ ನಡುವೆ ರಾಜಕಾರಣ ಮಾಡುವುದು ಬೇಡ. ಈ ಬಗ್ಗೆ ಆಡಳಿತ ಪಕ್ಷದಲ್ಲಿ ನಾನು ಇದ್ದಾಗಲೂ ಧ್ವನಿ ಎತ್ತಿದ್ದೇನೆ ಈಗ ವಿರೋಧ ಪಕ್ಷದಲ್ಲಿದಾಗಲೂ ಧ್ವನಿ ಎತ್ತುತ್ತಿದ್ದೇವೆ. ಜನರ ಬದುಕಿನ ನಡುವೆ ರಾಜಕಾರಣ ಬೇಡ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ತಾವೇನು ಮಾನ್ಯ ಸಚಿವರಿಗೆ direction ಕೊಟ್ಟಿದ್ದೀರಿ, ಅದರಲ್ಲಿ ಬಹಳ ಸತ್ಯಾಂಶವಿದೆ. 2013ರಲ್ಲಿ ಒಂದು writ petition file ಆಗಿದೆ. ಅಲ್ಲಿಗೆ affida vit ಕೊಡಲಿಕ್ಕೆ ಈ ರೀತಿಯ notice ಕೊಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಅಲ್ಲಿಯ ಸಮಸ್ಯೆ ಬಗೆಹರಿಸಬೇಕೇ ಬೇಡವೇ?

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕೇಳಿ. ಒಬ್ಬ ಮಂತ್ರಿಯಾಗಿ ಅಧಿಕಾರ ಹೊಂದಿದ್ದು ಆ ಕಾನೂನು ಪ್ರಕಾರ ಕ್ರಮ ಕೈಗೊಂಡ ವಿಚಾರವನ್ನು ಇಲ್ಲಿ ಹೇಳಲೇಬೇಕಾಗುತ್ತದೆ. ಈ ಸಮಸ್ಯೆಗೆ ಸಂಬಂಧಪಟ್ಟ ಜನರೆಲ್ಲ, ನಾವು ಸೇರಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರೋಣ.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ಪರಿಹಾರ ಸೂತ್ರ ಹುಡುಕಲಿಕ್ಕೆ ನಾವು ನೀವೆಲ್ಲ ಸೇರಿ ನೋಡಿ ಮಾಡೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಅರಣ್ಯ ಸಚಿವರು ಜವಾಬ್ದಾರಿಯುತವಾಗಿ ಉತ್ತರ ಕೊಡುತ್ತಿಲ್ಲ. ಇಲ್ಲಿ ನೋಟಿಸ್ ಕೊಡುತ್ತಿದ್ದಾರೆ, eviction ಮಾಡುತ್ತಿದ್ದಾರೆ, ಅಲ್ಲಿ ಯಾರು ಒತ್ತುವರಿ ಮಾಡಿದ್ದಾರೆ ಆ ರೈತರಿಗೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಚಿವರು specific ಆಗಿ ಉತ್ತರ ಕೊಡಬೇಕಾಗಿತ್ತು. ಹಾಗಾಗಿ ನಾವು protest ಮಾಡಿ walk out ಮಾಡುತ್ತೇವೆ. ಬೇಜವಾಬ್ದಾರಿಯಿಂದ ಉತ್ತರ ಕೊಡುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ನಾವು ಹಳೆಯದನ್ನು ಬಿಚ್ಚುವುದಕ್ಕೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, Meeting ಗೆ ಒಂದು date fix ಮಾಡಿ. ನಾಳೆ ಸಭೆ ಕರೆದು ಈ ಸಮಸ್ಯೆ ಬಗೆಹರಿಸುತ್ತೇವೆಂದು ಹೇಳಿ ಸರ್. ನಿಮ್ಮ ಮಾತಿಗೆ ನಾವು ಗೌರವ ಕೊಡುತ್ತೇವೆ.

ನಿಮಗೆ ಕಳಕಳಿ ಇದೆ. ಈ ಅರಣ್ಯ ಸಮಸ್ಯೆ ಕುರಿತಂತೆ ನಿಮ್ಮ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ಕರೆಯಿರಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಇದು ಶೂನ್ಯವೇಳೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಸ್ವಲ್ಪ ತಾಳಿ, ಸರ್. ನನ್ನನ್ನು ಕರೆದಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಈ ರೀತಿ ಸಮಸ್ಯೆ ಬಗೆಹರಿಸುವುದಕ್ಕೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಹೇಳಿದರೂ ಕೇಳುತ್ತಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಹಿಂದೆ ಶೂನ್ಯವೇಳೆಯಲ್ಲಿ ಸಾಕಷ್ಟು ಚರ್ಚೆಗಳಾಗಿವೆ.

(ಗೊಂದಲ)

ಅಧ್ಯಕ್ಷರು : ಅದನ್ನು ಬಿಚ್ಚಿಟ್ಟರೆ, ಅದನ್ನು ಬಿಚ್ಚಿಟ್ಟರೆ, ಆಯಿತು ಬಿಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸಭಾಪತಿಗಳು ಸೇರಿ, ನಮ್ಮ ಅಧ್ಯಕ್ಷರು ಸೇರಿ ಒಂದು ಮೀಟಿಂಗ್ ಮಾಡಿ. ಕೊನೆಪಕ್ಷ ನಾಳೆ ಒಂದು ಮೀಟಿಂಗ್ ಕರೆದು ನಮ್ಮನ್ನು ಸಮಾಧಾನ ಮಾಡಿ.

ಅಧ್ಯಕ್ಷರು : ಮಾಡೋಣ, ನಾನೂ ಅದನ್ನೇ ಹೇಳಿದ್ದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ಒಂದು ಟೈಂ ಫಿಕ್ಸ್ ಮಾಡಿ. ನಾಳೆ ಮಧ್ಯಾಹ್ನ ನಮಗೆ ಲಂಚ್ ಟೈಂನಲ್ಲಿ ಮೀಟಿಂಗ್ ಕರೆಯಿರಿ, ನಮಗೆ ಊಟ ಬೇಡ, ನಮ್ಮ ರೈತರು ಉಳಿಯಬೇಕು.

(ಗೊಂದಲ)

ಅಧ್ಯಕ್ಷರು : ಆಯಿತು ಬಿಡಿ ಉಡಿಯೂರಪ್ಪನವರೆ. ಅವರು ಒಪ್ಪಿದ್ದಾರೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : ನಾನು ಸಭಾಧ್ಯಕ್ಷನಾಗಿ ಸರ್ಕಾರದ ವಿರುದ್ಧವಾಗಿ ಮಾತನಾಡಿದ್ದೇನೆ.

(ಗೊಂದಲ)

ಡಾ: **ಹೆಚ್.ಸಿ.ಮಹದೇವಪ್ಪ** : ಫಾರೆಸ್ಟ್ ಲ್ಯಾಂಡ್ ಬಗ್ಗೆ ಸಮಸ್ಯೆಯಿದೆ.

(ಗೊಂದಲ)

ಶ್ರೀ **ಹೆಚ್.ಡಿ.ರೇವಣ್ಣ** : ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ಆಯಿತು ಬಿಡಿ, ಅವರು ಈಗ ಒಪ್ಪಿದ್ದಾರೆ ಮಾಡೋಣ ಬಿಡಿ.

(ಗೊಂದಲ)

ಶ್ರೀ **ಬಿ.ಎಸ್. ಯಡಿಯೂರಪ್ಪ** : ನಾಳೆ ಮಧ್ಯಾಹ್ನ ಊಟದ ಟೈಂ ನಲ್ಲಿ ಸಭೆ ಕರೆಯಿರಿ.

ಅಧ್ಯಕ್ಷರು : ಯಡಿಯೂರಪ್ಪನವರೆ, ಅವರು ಈಗ ಒಪ್ಪಿದ್ದಾರೆ. ಸಭೆ ಕರೆದು ಚರ್ಚೆ ಮಾಡಿ ಬಗೆಹರಿಸೋಣ.

ಶ್ರೀ **ಹೆಚ್.ಡಿ.ರೇವಣ್ಣ** : ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ಆಯಿತು, ಏನು ಹೇಳಿ.

ಶ್ರೀ **ಹೆಚ್.ಡಿ.ರೇವಣ್ಣ** : ಮಾನ್ಯ ದೇಶಪಾಂಡೆ ಸಾಹೇಬ್ರು ಇಲ್ಲಿಯೇ ಇದ್ದಾರೆ. ಮಾನ್ಯ ಮಹದೇವಪ್ಪನವರು ಇದ್ದಾರೆ. ಅವರೊಂದು ಮಾತು ಹೇಳಿದರು.

(ಗೊಂದಲ)

ಶ್ರೀ **ಆರ್.ವಿ. ದೇಶಪಾಂಡೆ:** ಅಧಿಕಾರಿಗಳನ್ನು ಕರೆದು ಸಭೆ ಮಾಡೋಣ.

(ಗೊಂದಲ)

ಶ್ರೀ **ಹೆಚ್.ಡಿ.ರೇವಣ್ಣ** : ದಯಮಾಡಿ ತಾಳ್ಮೆಯಿಂದ ಇರಿ, ಸರ್. ಸಭಾಧ್ಯಕ್ಷರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ, ತಮ್ಮ ಗಮನಕ್ಕೆ ತರುತ್ತೇನೆ.

(ಗೊಂದಲ)

ಅಧ್ಯಕ್ಷರು : ಆಯಿತು, ಅದು ಬೇಡ ಹೇಳಿ.

(ಗೊಂದಲ)

ಶ್ರೀ **ಹೆಚ್.ಡಿ.ರೇವಣ್ಣ** : ನಂತರ ನೀವು ಏನು ಬೇಕೋ ಮಾತನಾಡಿ. ಈಗ ತಾವು ಇವರು ಏನು ಮಾಡುತ್ತಿದ್ದರು ಎಂದು ಹೇಳಿದಿರಿ, ಅವರು ಬೇಡ, ಇವರು ಬೇಡ. ನಮಗೆ ಈ ಪ್ರಶ್ನೆ ಬೇಡ. ನನಗೆ ಎರಡು ನಿಮಿಷ ಅವಕಾಶ ಕೊಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನೀವು ಲೇಟಾಗಿ ಬಂದಿರಿ. ನಾನು ಏನು ಹೇಳಿದೆ ಎಂದರೆ, ಮಾನ್ಯ ಯಡಿಯೂರಪ್ಪನವರು ಮೀಟಿಂಗ್ ಮಾಡಿ ಎಂದು ಸಲಹೆ ಕೊಟ್ಟರು, ಮಾನ್ಯ ಸಭಾಧ್ಯಕ್ಷರೂ ಕೂಡ ಒಪ್ಪಿದರು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನನಗೆ ಗೊತ್ತು ಸರ್. ನನಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಈಗ ಸದನ ನಡೆಯುತ್ತದೆ. ಸಭೆ ಮಾಡಿದರೆ ಇಲ್ಲಿ ಯಾರು ಇರುತ್ತಾರೆ?

ಅಧ್ಯಕ್ಷರು : ಆಯಿತು ಬಿಡಿ. ನೀವು ಮುಗಿಸಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದು ಇವತ್ತಿನ ವಿಷಯವಲ್ಲ. ಮಾನ್ಯ ದೇವೇಗೌಡರವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಮಾನ್ಯ ದೇಶಪಾಂಡೆಯವರು ಮಂತ್ರಿಗಳಾಗಿದ್ದರು. ಮಹದೇವಪ್ಪನವರು ಇದ್ದರು. 1996 ರಲ್ಲಿ ಮಾನ್ಯ ದೇವೇಗೌಡರವರು ಇದ್ದಾಗ, ಇದಕ್ಕೆ ಬೇರೆ ಲ್ಯಾಂಡ್ ಕೊಡಬೇಕೆಂದು ಕೇಂದ್ರ ಸರ್ಕಾರ ಪರ್ಮಿಷನ್ ಕೊಟ್ಟಿರುವುದು ಇದೆ. ಬೇಕಾದರೆ ಕಡತ ತೆಗೆದು ನೋಡಿ. ಆಮೇಲೆ ಬೇಕಾದರೆ ತಮಗೆ ಕಡತದ ಪ್ರತಿ ತಂದು ಕೊಡುತ್ತೇನೆ. ಮೊದಲು ನೀವು ಕಡತ ತೆಗೆದು ನೋಡದೇ ಕೋರ್ಟ್ ಮುಂದೆ ನೀವು ಅದನ್ನು ಮುಚ್ಚಿಟ್ಟು ಇವತ್ತು eviction ಮಾಡುವುದಕ್ಕೆ ಹೋಗಿರುವುದು ತಪ್ಪು. ದಯಮಾಡಿ ಅದನ್ನು ಕೂಡಲೇ ನಿಲ್ಲಿಸಬೇಕು. 1996 ರಿಂದ ಕೇಂದ್ರ ಸರ್ಕಾರಕ್ಕೆ ಏನು ಪತ್ರ ವ್ಯವಹಾರ ಮಾಡಿರುವುದರ ಕಡಿತ ಇದೆ, ಅಲ್ಲಿಂದ ಪರ್ಮಿಪನ್ ಸಿಕ್ಕಿರುವ ಬಗ್ಗೆ ನೋಡಿ ಎಂದು ಹೇಳಿದರೆ, ಯಡಿಯೂರಪ್ಪ ಮಾಡಿದರು ಎಂದು ಹೇಳುತ್ತೀರಿ. 1996 ನಿಂದ ಕಾಂಗ್ರೆಸ್‌ನವರು ಏನು ಮಾಡಿದಿರಿ? ದಯಮಾಡಿ ಇದನ್ನು ಕೂಡಲೇ ತಡೆ ಹಿಡಿಯಬೇಕು. ಕೂಡಲೇ ತಡೆಹಿಡಿದು, ಅವತ್ತಿನಿಂದ ಕೇಂದ್ರ ಸರ್ಕಾರದೊಂದಿಗೆ ಏನು correspondence ಆಗಿದೆ, ಅದನ್ನು ಸದನದ ಮುಂದೆ ಇಡಲು ಹೇಳಿ.

ಅಧ್ಯಕ್ಷರು : ಆಯಿತು. ನೀವೂ ಸರ್ಕಾರ ಮಾಡಿದಂಥವರು. ಸುಮ್ಮನಿರಿ. ಅವರು meeting ಕರೆಯುತ್ತಾರೆ, ಚರ್ಚೆಮಾಡಿ ತೀರ್ಮಾನ ಮಾಡೋಣ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : ನಾನು ಕೊಡಗಿನ ಸಮಸ್ಯೆ ಬಂದಾಗ ಸರ್ಕಾರದ ವಿರುದ್ಧವೇ ಮಾತನಾಡಿದ್ದೇನೆ.

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ. ಮಾನ್ಯ ರಮೇಶ್ ಕುಮಾರ್‌ರವರೆ, ಮಾತನಾಡಿ. ಅವರು ಆಗಲೇ ಎದ್ದಿದ್ದಾರೆ. ಮಾನ್ಯ ಬೋಪಯ್ಯನವರೇ, ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಸದನದಲ್ಲಿ ಇಂತಹ ಸನ್ನಿವೇಶಗಳು ಆಗಾಗ ಬರುತ್ತವೆ. ಮಂತ್ರಿಗಳು ಇರತಕ್ಕಂಥ ಸ್ಥಿತಿಯಲ್ಲಿ ಅವರು ಈಗ ಹೇಳಿರುವುದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ಆಗುವುದಿಲ್ಲ. ಆದರೆ, ತಾವು ಸಭಾಧ್ಯಕ್ಷ ಪೀಠದಿಂದ ನಮ್ಮ ಎಲ್ಲ ಸದಸ್ಯರಿಗೂ ಆ ರೈತರಿಗೆ ತೊಂದರೆಯಾಗುವುದಿಲ್ಲವೆಂದು ಒಂದು ಆಶ್ವಾಸನೆ ಕೊಡಿ. That will be a commitment from your side and we will all be happy. ತಕ್ಷಣ ತಾವು ನಾಳೆ ದಯಮಾಡಿ ಸಂಬಂಧಿಸಿದ ಶಾಸಕರು ಯಾರಿದ್ದಾರೆ, ಅವರು, ಅರಣ್ಯ ಸಚಿವರು ಮತ್ತು ಅಧಿಕಾರಿಗಳ ಒಂದು ಸಭೆ ಕರೆಯಿರಿ. ಈಗ ಸುಮ್ಮನೆ ಅದನ್ನೇ ಎಷ್ಟು ಹೊತ್ತು ಮಾತನಾಡುವುದು? ಅಧ್ಯಕ್ಷ ಪೀಠದಿಂದ ತಾವು ಆ ರೈತರಿಗೆ ತೊಂದರೆಯಾಗುವುದಿಲ್ಲವೆನ್ನತಕ್ಕಂಥ assurance ಅವರಿಗೆ ಕೊಟ್ಟರೆ, that is more than enough. ತಾವು ಹೇಳಬಹುದು. ತಾವು ಹೇಳಿ. ಮತ್ತೆ ಅದನ್ನು ಹೇಗೆ ಕಾಪಾಡುವುದು ಎಂದು ನಾವು ಕುಳಿತು ಮಾತನಾಡೋಣ. We will try to move on to the next thing.

ಅಧ್ಯಕ್ಷರು : ಸ್ವಲ್ಪ ತಾಳಿ. ಈ ವಿಚಾರದಲ್ಲಿ ತುಂಬಾ ಆಳವಾಗಿ ಹೋಗಿ ನಾನೂ ಎಲ್ಲವನ್ನೂ ನೋಡಿದ್ದೇನೆ ಮಹಾರಾಯರೆ ಅದನ್ನೆಲ್ಲ ನಾನು ಕೆದಕುವುದಕ್ಕೆ ಹೋಗುವುದಿಲ್ಲ. ಈಗ ಸಮಸ್ಯೆಯನ್ನು ಬಗೆಹರಿಸಬೇಕು. ಮಾನ್ಯ ಮಂತ್ರಿಗಳೂ ಕೂಡ ಒಂದು ಸಭೆ ಕರೆದು ಚರ್ಚೆ ಮಾಡಿ ಮಾಡೋಣವೆಂದು ಒಪ್ಪಿಕೊಂಡಿದ್ದಾರೆ. ಅದಕ್ಕೆ ನಾನು ಮಂತ್ರಿಗಳಿಗೆ ಹೇಳುತ್ತಿದ್ದೇನೆ, ವಿಳಂಬ ಮಾಡದೇ ಒಂದು ಸಭೆ ಕರೆದು ಚರ್ಚೆ ಮಾಡಿಬಿಟ್ಟರೆ ಇದು ಬಗೆಹರಿಯುತ್ತದೆ.

(ಗೊಂದಲ)

ಅಧ್ಯಕ್ಷರು : ಸ್ವಲ್ಪ ತಾಳಿ. ಅವರು ಏನು ಹೇಳುತ್ತಾರೆಂದು ಕೇಳೋಣ. ಹಳೇ ಮಂತ್ರಿಗಳು ಏನೋ ಹೇಳುತ್ತಾರೆ ಕೇಳಿ. ತಾವು ಹೇಳಿ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯಲ್ಲಿ ಹಿಡ್ಕಲ್ ಡ್ಯಾಂ, ನವಿಲುತೀರ್ಥ, ಕಟ್ಟುವಾಗ ಮುಳುಗಡೆಯಾದಂಥ ಹಳ್ಳಿಗಳು

shift ಆಗಿ ಬೇರೆ ಹಳ್ಳಿಗಳನ್ನು ನಿರ್ಮಾಣ ಮಾಡಿದ್ದಾರೆ. ಆ ಹಳ್ಳಿಗಳಿಗೆ ಜಮೀನು allot ಮಾಡಿದ್ದಾರೆ. But ಅವರು papers ಕಳೆದುಹಾಕಿಕೊಂಡಿದ್ದಾರೆ. ಇವತ್ತು ಅವರನ್ನೂ ಸಹ ಒಕ್ಕಲೆಬ್ಬಿಸುವಂಥ ಕೆಲಸ ಆಗುತ್ತಿದೆ.

ಅಧ್ಯಕ್ಷರು : ಈಗ ನಿಮಗೆ ಅದು ಗೊತ್ತಾಯಿತೇ?

ಶ್ರೀ ಉಮೇಶ್ ವಿ. ಕತ್ತಿ : ಇಲ್ಲ ಸರ್. ಇದೇ ವರ್ಷ ಚಾಲೂ ಆಗಿದೆ. ಮೊದಲು ಇರಲಿಲ್ಲ. ಆ ಸಭೆಯಲ್ಲಿ ನಮ್ಮನ್ನೂ consider ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಆಯಿತು ಬಿಡಿ. ಈಗ ಮಾಡೋಣ.

ಶ್ರೀ ಉಮೇಶ್ ವಿ.ಕತ್ತಿ : ಅಧ್ಯಕ್ಷರೆ, ಅವರಿಗೆ notice ಇಲ್ಲ.

ಅಧ್ಯಕ್ಷರು : ಆಯಿತು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಅವರು ನಾಳೆ ಮಧ್ಯಾಹ್ನ meeting ಕರೆಯಬೇಕು. ನಾಳೆ ಊಟದ ಸಮಯದಲ್ಲಿ ಕರೆಯಿರಿ, ನಾವು ಬರುತ್ತೇವೆ. ಊಟ ಬೇಡ. ನಮಗೆ ರೈತರು ಉಳಿದರೆ ಸಾಕಾಗಿದೆ. ಮಾನ್ಯ ಅಧ್ಯಕ್ಷರೆ, ನಾಳೆ ಮಧ್ಯಾಹ್ನ ಊಟ ಬೇಡ, ಆ ಸಮಯದಲ್ಲಿ ಮೀಟಿಂಗ್ ಕರೆಯಲು ಹೇಳಿ, ನಾವು ಬರುತ್ತೇವೆ.

ಅಧ್ಯಕ್ಷರು : ಹೌದೇ? ಮಾನ್ಯ ಯಡಿಯೂರಪ್ಪನವರೇ ನಾನು ಹೇಳಲೇ?

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ನಮ್ಮ ರಕ್ಷಣೆಗೆ ಬಂದಿದ್ದೀರಿ, ಅದಕ್ಕೇ ನಾನು ಕೈಜೋಡಿಸಿ ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ನಾಳೆ ಮಧ್ಯಾಹ್ನ ಊಟದ ಸಮಯದಲ್ಲಿ ಅವರು ಮೀಟಿಂಗ್ ಕರೆಯಲಿ. ನೀವು ಏನು ಹೇಳುತ್ತೀರೋ ನಾವು ಅದನ್ನು ಕೇಳುತ್ತೇವೆ.

ಅಧ್ಯಕ್ಷರು : ಎಲ್ಲರೂ ಸೇರಿ ಮಾಡೋಣ ಸುಮ್ಮನಿರಿ. ಈಗ ನಮ್ಮ ಕಷ್ಟ ನಿಮಗೆ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅರಣ್ಯ ಮಂತ್ರಿಗಳು ಸಭೆಯನ್ನು ಕರೆದ ಸಂದರ್ಭದಲ್ಲಿ ಒಬ್ಬೊಬ್ಬರ ಅಭಿಪ್ರಾಯಗಳು ವಿಭಿನ್ನ ಇರುತ್ತವೆ. ಇದು ಒಂದೇ ಪ್ರದೇಶಕ್ಕೆ ಸೀಮಿತವಾದ ವಿಚಾರವಲ್ಲ. ಹೀಗಾಗಿ ತಾವು ಮೀಟಿಂಗ್ ಕರೆದರೆ ಕೊನೆ ಪಕ್ಷ 3--4 ಗಂಟೆಗಳ ಕಾಲ ಸಭೆಯಲ್ಲಿ ಕುಳಿತು ಕೊಳ್ಳಬೇಕಾಗುತ್ತದೆ. ಎಲ್ಲಾ ಅಧಿಕಾರಿಗಳು ಮತ್ತು ಸಂಬಂಧಿಸಿದ ಎಲ್ಲಾ ಶಾಸಕರು

ಕುಳಿತು ಚರ್ಚೆ ಮಾಡಬೇಕಾಗುತ್ತದೆ. ನಾಳೆ ಸದನ ನಡೆಯುವಂಥ ಸಂದರ್ಭದಲ್ಲಿ ಸಭೆಗೆ ಎಷ್ಟು ಜನ ಭಾಗವಹಿಸಲಿಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಸೋಮವಾರ ಸಭೆ ಮಾಡೋಣ ಎಂದು ಮಂತ್ರಿಗಳು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು : ಆಯಿತು, very good ಮಾಡೋಣ. ಶೆಟ್ಟರ್‌ರವರೆ, ಮಾಡೋಣ ಬಿಡಿ ತಾವು ಸ್ವಲ್ಪ ಸುಮ್ಮನಿರಿ. ಅವರು ಒಪ್ಪಿಕೊಂಡಿದ್ದಾರೆ ಇದನ್ನು ಬಗೆಹರಿಸೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ತಾವು ಭರವಸೆ ಕೊಟ್ಟ ಮೇಲೆ ಮುಗಿಯಿತು.

ಶ್ರೀ ಟಿ.ಬಿ. ಜಯಚಂದ್ರ : ಸೋಮವಾರ ಸಭೆ ಕರೆದು ಚರ್ಚೆ ಮಾಡೋಣ. ಸೋಮವಾರ ಸಭೆ ಕರೆಯುತ್ತಾರೆ. ಆ ಭಾಗದ ಎಲ್ಲ ಶಾಸಕರು ಮತ್ತು ಎಲ್ಲಾ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುವುದಕ್ಕಾಗುತ್ತದೆ.

ಅಧ್ಯಕ್ಷರು : ಆಯಿತು ಬಿಡಿ. ಸೋಮವಾರ ಸಭೆ ಕರೆಯಿರಿ. ಈಗ ವಿಶ್ವೇಶ್ವರ ಹೆಗಡೆಯವರು ತಾವು ಕೇಳಿ. ಆಯಿತು ಬಿಡಿ ನಾನು ಮಾಡಿಸುತ್ತೇನೆ ಬಿಡಿ.

ಶ್ರೀ ಬಿ.ರಮಾನಾಥ ರೈ : ಇದರಲ್ಲಿ ಬೇರೆ ಬೇರೆ ವಿಚಾರ ಇನ್‌ವಾಲ್ವ್ ಆಗಿದೆ. ಸುಪ್ರೀಂ ಕೋರ್ಟಿನ ಆದೇಶ ಎಲ್ಲವನ್ನೂ ನಾವು ಚರ್ಚೆ ಮಾಡಿ ಒಂದು ಸೂಕ್ತವಾದ ಪರಿಹಾರ ಸೂತ್ರವನ್ನು ಮಾಡೋಣ. ಮುಂದಕ್ಕೆ ಶಾಶ್ವತವಾಗಿ ಏನು ಮಾಡಬೇಕೆಂಬುದರ ಬಗ್ಗೆಯೂ ಕೂಡ ಚರ್ಚೆ ಮಾಡೋಣ.

ಶ್ರೀ ಕೆ.ಜಿ.ಬೋಪಯ್ಯ : ಆ ಸಭೆಯಲ್ಲಿ ಕಂದಾಯ ಇಲಾಖೆಯ ಎಲ್ಲಾ ಅಧಿಕಾರಿಗಳು ಇರಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ಆಗಬಹುದು.

ಅಧ್ಯಕ್ಷರು : ಆಯಿತು ಬಿಡಿ, ಮಾಡೋಣ. ರೀ ಸ್ವಾಮಿ ಮಾಜಿ ಅಧ್ಯಕ್ಷರೆ, ಸ್ವಲ್ಪ ಸುಮ್ಮನಿರಿ.

ಶ್ರೀ ಕೆ.ಜಿ.ಬೋಪಯ್ಯ : ಆ ಸಭೆಯಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಇರಬೇಕಾಗುತ್ತದೆ. ಏಕೆಂದರೆ, ಸಮಸ್ಯೆ ಇರುವುದೇ ಅವರೊಳಗೆ, ಅದನ್ನು ಅವರೇ ಬಗೆಹರಿಸಿಕೊಳ್ಳಬೇಕಾಗುತ್ತದೆ. ನಮ್ಮನ್ನು ಸುಮ್ಮನೆ ಇಕ್ಕಟ್ಟಿಗೆ ಸಿಲುಕಿಸುತ್ತಾರೆ.

(ಗೊಂದಲ)

ಅಧ್ಯಕ್ಷರು : ಆಯಿತು ಬಿಡಿ. ಕಾಗೇರಿಯವರೆ, ತಾವು ಪ್ರಸ್ತಾಪಿಸಿ.

4. ವಿಷಯ : ಜೋಯಿದಾ ತಾಲ್ಲೂಕಿನ ಉಳವಿಯಲ್ಲಿನ ಜೂನಿಯರ್ ಕಾಲೇಜಿನಲ್ಲಿದ್ದ ಶಿಕ್ಷಕರನ್ನು ಬೇರೆಕಡೆಗೆ ಹಾಕಿರುವ ಬಗ್ಗೆ.

ವಿಶ್ವೇಶ್ವರ ಹೆಗಡೆ ಕಾಗೇರಿ (ಸಿರ್ಸಿ) : ನಾನು ಒಂದೇ ಒಂದು ನಿಮಿಷ ಜಾಸ್ತಿ ಸಮಯ ಈ ವಿಚಾರದಲ್ಲಿ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು : ಯಾವ ವಿಚಾರ. ಅದೆಲ್ಲಾ ಗೊತ್ತಿದೆ ಅದನ್ನು ಚರ್ಚೆ ಮಾಡೋಣ ಸುಮ್ಮನಿರಿ. ಆಯಿತು ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾದಂಥ ದೇಶಪಾಂಡೆಯವರಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ಜೋಯಿಡಾ ತಾಲ್ಲೂಕಿನ ಉಳವಿಯಲ್ಲಿ ಜೂನಿಯರ್ ಕಾಲೇಜು ಇತ್ತು. ಒಂದೊಂದು ಕ್ಲಾಸ್‌ಗೆ ಎರಡೆರಡು ಹುಡುಗರು ಒಟ್ಟು ನಾಲ್ಕು ಹುಡುಗರು ಇದ್ದರು. ಅಲ್ಲಿರುವಂಥ ಶಿಕ್ಷಕರಿಗೆ ಸುಮಾರು ಎರಡೂವರೆ ಲಕ್ಷ ರೂಪಾಯಿ ಪಗಾರ ಕೊಡುತ್ತಿದ್ದೆವು.

ಅಧ್ಯಕ್ಷರು : ಸಿಂಪಲ್ಲಾಗಿ ಹೇಳಿ. ಅಲ್ಲಿಂದ ತೆಗೆದು ಬೇರೆ ಕಡೆಗೆ ಹಾಕಿದ್ದಾರಲ್ಲವೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹೌದು.

ಅಧ್ಯಕ್ಷರು : ಈಗ ಅಲ್ಲಿ ಇರಬೇಕೆಂದು ನೀವು ಹೇಳುತ್ತೀರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗ ಅಲ್ಲಿಂದ ತೆಗೆದು ಸಿದ್ದಾಪುರ ತಾಲ್ಲೂಕಿನ ಕಾನಗೋಡ ಎನ್ನುವ ಹಳ್ಳಿಗೆ ಹಾಕಿದ್ದಾರೆ. ಅದು ಶಿವಮೊಗ್ಗ ತಾಲ್ಲೂಕಿನ ಸೊರಬದ ವಿದ್ಯಾರ್ಥಿಗಳಿಗೂ ಹಾಗೂ ಚಂದ್ರಗುತ್ತಿಯ ಭಾಗದ ವಿದ್ಯಾರ್ಥಿಗಳಿಗೂ ನಮ್ಮ ಸಿದ್ದಾಪುರ ತಾಲ್ಲೂಕಿನ ಬಡ ವಿದ್ಯಾರ್ಥಿಗಳಿಗೂ ಸೇರಿದಂತೆ 75 ಜನ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತದೆ. ಅವರೆಲ್ಲರೂ ಬಂದು ನನಗೆ ಮನವಿ ಮಾಡಿದ್ದಾರೆ.

ಅಧ್ಯಕ್ಷರು : ಮಾನ್ಯ ಸಚಿವರೇ ಇವೆಲ್ಲಾ ಸಣ್ಣ ಸಣ್ಣ ವಿಚಾರ. ಕಾನಗೋಡಿಗೆ ಇನ್ನೊಂದು ಮಂಜೂರು ಮಾಡಿಕೊಡುತ್ತೇನೆಂದು ಬೇಗ ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗೇನು ಬದಲು ಮಾಡಿದ್ದಾರೆ, ಅದನ್ನು ಅದೇ ಸ್ಥಾನದಲ್ಲಿ ಮುಂದುವರಿಯುವಂತೆ ಮಾಡಬೇಕೆಂದು ವಿನಂತಿ.

(ಗೊಂದಲ)